DEMANDS FOR ADDITIONAL AND SUPPLEMENTARY GRANTS 1952-53.

Demand No. 1.—**Land Revenue.**

7. *LAND REVENUE.*

MR. SPEAKER.—Motion moved:

"That a supplementary sum not exceeding Rs. 2,88,000 be granted to the Government to defray the charges which will come in course of payment during the year ending 31st day of March 1953 in respect of 'Land Revenue'."

I would like to suggest one thing in this connection. There are a number of cut motions received in respect of a few demands. We may take them up first. After they are disposed of, we will take up the other demands that would facilitate the work.

Sources to meet the extra items of expenditure.

SRI J. MOHAMED IMAM (Jagalur).—I beg to move:

"That the demand under the head '7. Land Revenue' for Rs. 2,88,000 be reduced by Rs. 100 (to know why these items of expenditure were not included in the Budget, and from which source the Government are going to meet these items of expenditure)".

The Government are now asking the permission of this House for an additional grant of nearly Rs. 1,85,00,000 and under 'Land Revenue' they have been seeking for a further grant of Rs. 2,88,000. Let me explain the principle and the occasions on which a supplementary grant is asked and on which a supplementary expenditure is necessitated. Such of the items or such of the expenditure as could not be envisaged at the time of framing a normal budget and as could not be foreseen—it is only on such items that the Government is entitled to ask for supplementary grant. On the other hand, if an item of expenditure forms part of normal expenditure and which was available and which was within the knowledge of the Government and which was the usual item of expenditure, then it is the duty of the Government to include it in the normal budget. Otherwise the whole financial structure will be upset. Why do we prepare a budget? What is the intention of framing a budget every year and why is it laid before this House? A budget is prepared not only to provide the necessary items of expenditure for the current year but also to ascertain the exact financial position of the State. Let us take, for example, the recent budget. According to the budget and according to the Government, there is a deficit of Rs. one crore and odd. That was the financial position at that time. But, on the other hand, if all these items of expenditure had been included in the normal budget, then the financial position would have been quite different. Most of these items of expenditure are of such nature that they are practically recurring items of expenditure, items of expenditure which would have been anticipated, which were available for the information of the Government.

Sir, I can give you some examples. There are many items of expenditure which constitute arrears of bills or arrears of payment. All these arrears of bills and payments could have been included in the Budget. They have not done so. For example, purchase of inam villages forfeited to Government. The Government decided long ago to purchase inam villages and give compensation. This ought to have been provided at the time of framing the Budget. Similarly, there are other items of expenditure. Why did not the Government include all these items in the Budget? The presumption is that the Government were not anxious to show the actual budgetary provision at that time and they wanted to show that the budget was really a sound one, whereas it is not. If all these items had been included in the Budget, then the total deficit according to the Government would have been two crores eighty-five thousand lakhs of rupees, *i.e.*, the total deficit comes to three crores. By including these items, the financial position will be

(SRI J. MOHAMED IMAM)
upset. This is an instance where the Government have not done their duty. They have not included all items of expenditure which ought to have been included. Now they come forward to ask us to vote one crore and eighty-five lakhs the consequence of which on the financial position will be that we will have to face a deficit of nearly three crores. As you can see from the Budget, according to the Finance Minister himself, the deficit was one crore. Now if we add this one crore and eighty-five lakhs, the total deficit will be two crores and eighty-five lakhs.

Another thing which I have to point out is this. The Government have been asking for this additional grant. How to meet this demand ? From which source are you going to get this amount ? Are you going to meet this from the Consolidated Fund, or from the Contingency Fund or have you improved the resources of the State to meet this expenditure ? As it is, the financial position, as revealed at the time of the last Budget session, is this : so far as normal income and normal expenditure are concerned, the normal expenditure exceeds normal income by one crore and odd, according to the Government. Secondly, they have no funds from which they can draw this amount. The total amount of funds which form a liability on the Government comes to 31 crores as against which they have been holding securities only to the extent of 15 crores. You have no other source of revenue. You have no other funds, as can be seen from the Budget from which you can meet. Closing balance is almost nil. From which source then are you going to meet these items of expenditure ? When you ask for further grants and further items of expenditure, it is the duty of the Government to point out whether they are going to meet these items of expenditure from the normal revenue or from the funds or by reappropriation which Government have not done so far. My experience and feeling is that the Government have absolutely no resources to meet the items of expenditure. All the funds are exhausted. They cannot meet these items of expenditure from the normal revenue because normal expenditure exceeds the normal revenue by more than a crore and they have not improved their resources. They cannot meet this expenditure from the Contingency Fund because the Contingency Fund is practically non-existent. So also in the case of Consolidated Fund. It is the duty of the Government to place before this House what the position of the Consolidated Fund is. All these items have to be met from the Consolidated Fund. What is the position of the Consolidated Fund ? How are you going to meet this ? But I can say with all the responsibility, that the Consolidated Fund, according to the Budget, is practically zero.........

Sri K. HANUMANTHAIYA (Chief Minister).—How can zero be a fund ?

Sri J. MOHAMED IMAM.—There are no funds invested. You are on the minus side. You show me the position of the Consolidated Fund. You cannot take Savings Bank Deposit or Insurance Fund or Closing Balance as the items of revenue. If you are going to meet this expenditure from the Municipal Deposits or District Board Deposits, then the Government will be in for a greater trouble after some time when their financial position will be hopeless. Sir, I oppose the demand on two grounds. Firstly, these items of expenditure ought to have been anticipated at the time of framing the Budget and included in the Budget then alone and secondly there are no resources and there are no funds from which this extra item of expenditure could be met. If you allow these further grants, then the financial position of the State will be very serious. Perhaps some remarks apply to other items of expenditure. On these two grounds, I oppose the demand. I move this cut motion and place it before the House for its acceptance.

Mr. SPEAKER.—Cut motion moved :

"That the demand be reduced by Rs. 100".

Sri K. HANUMANTHAIYA.—The Hon'bl Member who just now spoke

has covered a wide ground and he has questioned what is called the soundness of the finances of the Government which has been repeated by him a number of times. Why these supplementary demands had to be brought before the House has to be explained. So I seek your indulgence to explain in a few pages of written matter.

In placing the Supplementary Estimates for the consideration of the House I would like to make a brief statement......

Sri J. MOHAMED IMAM.—On a point of information; I wish the Hon'ble Chief Minister had made this statement earlier.

Mr. SPEAKER.—But unfortunately, the procedure has been changed recently and the very first motion will have to be put from the Chair. Otherwise, he would have done it or otherwise I would have asked him to make that statement.

Sri J. MOHAMED IMAM.—Then we would have had some matter.

Sri K. HANUMANTHAIYA.—My Hon'ble friend can always revise his opinion and he does so very often.

Sri J. MOHAMED IMAM.—I am definite regarding my views.

Sri K. HANUMANTHAIYA.—The introductory memorandum appended to the Supplementary Estimates explains briefly the circumstances under which the statement has to be presented to the Legislature. Explanations have been given under each Demand regarding the need for the additional funds. I am aware of the position that when the main Estimates passed by the Legislature during the previous Session, anticipated a deficit of Rupees one crore, there should not generally be any demand for Supplementary Grants which would only increase the deficit and worsen the financial position. It is, therefore, my primary duty to explain how these Supplementary Demands, aggregating Rs. 186·23 lakhs, is proposed to be met. The following are the resources for the several demands.

Demand No. 10.

22—INTEREST ON DEBT AND OTHER OBLIGATIONS.

The Supplementary Estimates include a Demand for Rs. 37·40 lakhs under the head "Charged". According to the classification hitherto followed in Mysore, Interest on Public Debt, *i.e.*, money borrowed in open market or from the Centre was being treated as charged, *i.e.*, not voted, while interest or unfunded debt and other obligations, *i.e.*, State Life Insurance, Savings Bank, State Provident Fund and Endowments was being subject to the vote of the Legislature. It is now held that the interest on all those items may be treated as charged. You are aware that our Budget has undergone drastic changes in classification during the last two years and the present Supplementary Grant is only on account of change in classification by transferring the grant from "Voted" to "Charged". Such minor changes will be inevitable for another two years till all our Account Heads are brought into strict conformity with the procedure in 'Part A' States. So far as this Demand is concerned, it does not affect our financial position and has been done only on technical grounds.

Demand 8.

18—THE REVENUE EXPENDITURE FINANCED FROM ORDINARY REVENUE: Rs. 5 LAKHS.

In view of adverse seasonal conditions increased allotments had to be made for restoration of minor tanks and desilting. A portion of this is expected to be covered by G.M.F. Grants. It is true that during the past 15 days there has been some rains and these additional grants will be utilised only where there is absolute need.

Demands 19 and 20.

MEDICAL AND PUBLIC HEALTH: Rs. 90,000.

Out of this, Rs. 60,000 is on account of change in classification and a corresponding amount under other heads is surrendered as explained in the Supplementary Estimates.

Demand 26.

INDUSTRIES AND SUPPLIES Rs. 1,97,200.

This refers to working expenses of Sandal Oil Factory and will be fully covered by the increased sales.

Demand 29.

50-CIVIL WORKS: Rs. 49,400.

This grant is also on account of change in classification due to abolition of Architect's Fee Fund. The receipts on account of Architect's Fee will be taken as regular Revenue Receipts and gross expenditure has been provided instead of the net Grants.

Demand 30.

54—FAMINE RELIEF: Rs. 20 LAKHS.

Government have allotted Rs. 33 lakhs for Distress Relief Works in addition to a grant of Rs. 8 lakhs for land improvement and takavi loans. The Legislature had voted only Rs. 20 lakhs and the excess has been met from the Contingency Fund. In order to recoup the Fund and to meet further emergent needs, a further grant of Rs. 20 lakhs has been asked for. The contributions received by me so far towards the Chief Minister's Relief Fund, the constitution of which was announced during the last Session, is Rs. 2·06 lakhs. Collections have also been made in the Districts which is roughly about a lakh. The collection in Kolar District which is the most affected area, is Rs. 6,537-12-0. The collecton in other Districts is as under.—

Shimoga District	...	10,416	15	0
Chitaldrug ,,	...	859	0	0
Hassan ,,	...	3,732	0	0
Bangalore ,,	...	75,000	0	0

The entire collections have been credited to the Famine Insurance Reserve, from which the Supplementary Grant will be met

Demand 38.

ELECTRICITY:—CONTRIBUTION TO DEPRECIATION RESERVE: Rs. 10 LAKHS.

At the time the Budget was presented, the Jog Units had not come into full operation and as the contribution for Depreciation has now to be calculated with reference to the actual Capital Outlay brought into servicing, the need for this Grant has arisen. As the members are aware, the Electrical Department is a growing concern and these additional charges will be covered with the increased receipts in due course in future years.

Demand 42.

POWER SUPPLY TO IRRIGATION PUMPS: Rs. 30 LAKHS.

In the Budget Estimates, the Electrical Capital included a total grant of Rs. 185 lakhs which included Rs. 20 lakhs for power supply to irrigation pumps (Page 136, Vol. II of the Budget). The Government of India have promised a loan of Rs. 100 lakhs for financing Capital Programme under Electricity and a further loan of Rs. 50 lakhs for power supply to irrigation pumps. To supplement the Grant already provided in the Budget for irrigation pumps for which a specific loan of Rs 50 lakhs is given, a further grant of Rs. 30 lakhs is necessary.

An expenditure of Rs. 13 lakhs has already been incurred. The incomplete works will still require a sum of Rs. 23 lakhs. There are fresh estimates, aggregating Rs. 31 lakhs which include only those costing less than Rs. 1,000 per H.P. There are estimates, aggegating Rs. 50 lakhs, costing more than Rs. 1,000 per H.P. It is proposed to complete all the incomplete works and take up fresh works according to a definite programme. The estimates are being sanctioned on a priority basis giving preference to the Distress Areas. The total number of pumps during 1947-48 was 1,283. During 1950-51, it was 2,385. During 1951-52, it was 3,387. During the current year, the total number to end of August stood at

3,773. It will be seen that considerable progress has been made in this respect.

Demand 45.

LOANS TO MUNICIPALITIES AND DISTRICT BOARDS: Rs 58 LAKHS.

The main demand refers to grant of a loan of Rs. 50 lakhs to the Municipalities. The balance of Rs. 8 lakhs refers to District Board Elections.

Whenever I have toured in the districts, I have invariably made it a point to have discussions with the Municipal Councils about their needs. The local bodies are the nurseries of Democracy. If they function well, we will have a large number of people well trained in the art of Democracy. In this view, I have sincerely felt that it is the duty of the Government to encourage Local Bodies in all their spheres of activities. All the Local Bodies, I found, had ambitious schemes for town improvement, for giving good water supply and for providing good drainage. Their main trouble, however, has been want of Finance. They have appealed to Government to provide them with necessary funds, so that they may go ahead with these essential items of work. As you know, Government itself is short of funds. It would have been easy for me to reply that they should be self-reliant and that no help would be forthcoming from Government. But Government felt that it would not be correct to take that attitude. We have to find some means by which we could meet these necessary demands. I was also very anxious that the residents of cities and towns should be provided with modern amenities. I therefore requested all the Local Bodies in the State to make comprehensive plans of town improvement and to let Government know the exact amount that they would require for water-supply, for drainage and for other improvement works. The imformation has been collected. According to the information availble, the amount required for water-supply is Rs. 260·45 lakhs, for drainage schemes Rs. 209.83 lakhs and for other improvement works Rs. 57 lakhs, making a total of Rs. 527·28 lakhs. You will see that this is a very large amount.

Of the three categories of works, Government felt that provision of water supply should receive top-priority. To make a beginning, Government have decided to give loans to the Municipalities to the extent of Rs. 50 lakhs this year.

The money given in each of the last two years was as follows:—

Year	*Grant* Lakhs	*Loan* * Lakhs
1950–51	4·48	7·54
1951–52	4·92	5·65
1952–53	4·00	53·00

*(The loans given in previous years were not only for water supply but also for other purposes like drainage, etc.)

You will kindly see that the amount proposed to be given now is the largest sum ever given to the Local Bodies in a single year. It is proposed to raise this Rs. 50 lakhs as a loan a from a well-known Bank. I am confident that the provision of the loan to Local Bodies will result in providing good water supply in a large number of towns in the State.

The loans to District Boards will also be met from borrowed funds.

Conclusion.

I have pointed out specific resources to the extent of about Rs. 163 lakhs as against the Supplementary Demand of about Rs. 186 lakhs. Out of the balance of Rs. 23 lakhs, a sum of Rs. 7·87 lakhs, being the repayment of Public Debt, will be met from Sinking Fund, and the remaining amount of Rs. 15 lakhs will be covered by the usual lapse of Grants in the various Departments at the end of the year.

The Hon'ble Minister will reply to the specific demand under "Land Revenue."

1-30 P.M.

Sri Kadidal MANJAPPA (Minister for Revenue and Public Works).—Sir, the cut motion refers to the demand under "Land Revenue." No doubt Sri Mohamed Imam referred to several other aspects of the Budget. I will confine myself only to the demand in question. Sri Mohamed Imam perhaps

(SRI KADIDAL MANJAPPA)

presumed that the Government had made up their mind with regard to the purchase of inams at the time the Budget was placed before this House. The amount now asked for is intended to purchase some of the inams where inamdars have defaulted in paying land revenue and as a consequence of which the inams are forfeited to Government. At that time, namely, at the time of placing the Budget before this House, we could not foresee that the inamdars would default in paying land revenue and that the inams would be forfeited to Government. The next item is for paying remuneration to Shanbhogs and Patels. This is in connection with the revision of the potgi of the Shanbhogs and Patels.

Janab J. MOHAMED IMAM.—It was done long ago.

Sri Kadidal MANJAPPA.—This expenditure we could not foresee at that time.

Sri M. SANKARLINGE GOWDA (Nagamangala) Could you not foresee the decennial revision?

Sri Kadidal MANJAPPA.—We could not foresee this demand. We had no information that we had to do that this year. So also with regard to other items. For these reasons, I submit that the demand is in order and that there is no substance in the objection raised by Sri J. Mohamed Imam.

Sri M. SANKARLINGE GOWDA.—No doubt the demand is in order. But the cut motion says; "to know why these items of expenditure were not included in the Budget and from which source the Government are going to meet these items of expenditure."

Sri Kadidal MANJAPPA.—I forgot to mention that fact. The expenditure will be met out of the General Savings and also Retrenchment.

Sri M. SANKARLINGE GOWDA.—The Hon'ble Minister has answered it.

Sri J. MOHAMED IMAM.—I press the cut motion.

Mr. SPEAKER.—The question is:

"That the demand be reduced by Rs. 100."

The motion was negatived.

Mr. SPEAKER.—The question is:

"That a supplementary sum not exceeding Rs. 2,88,000 be granted to the Government to defray the charges which will come in course of payment during the year ending 31st day of March 1953 in respect of 'Land Revenue'."

The motion was adopted.

Demand No. 6. Charges on Account of Motor Vehicles Acts.

12. Charges on account of Motor Vehicles Acts.

Mr. SPEAKER.—Motion moved:-

"That a supplementary sum not exceeding Rs. 7,500 be granted to the Government to defray the charges which will come in course of payment during the year ending 31st day of March 1953, in respect of 'Charges on account of Motor Vehicles Acts'".

There is a cut motion standing in the name of Sri Mulka Govinda Reddy.

Sri M. LINGANNA.—On a point of information, Sir. Demand No. 3 has not been placed before this House.

Mr. SPEAKER.—I said that motions for demands where there are no cut motions would be taken up at the end. At the very outset I made that statement.

Posting a Deputy Commissioner as Secretary, State Transport Authority.

ಶ್ರೀ ಮುಲ್ಕಾ ಗೋವಿಂದರೆಡ್ಡಿ (ಚಿತ್ರದುರ್ಗ).—ಸ್ವಾಮಿ, ಈಗ ನನ್ನ ಮುಂದಿಟ್ಟಿರತಕ್ಕ ಈ ಡಿಮ್ಯಾಂಡಿಗೆ ಒಂದು ಖೋತಾ ಸೂಚನೆಯನ್ನು ಕಳುಹಿಸಿದ್ದೇನೆ. ಅದು ಈ ರೀತಿ ಇದೆ:

"The demand under the head '12. Charges on account of Motor Vehicles Acts' for Rs. 7,500 be reduced by Rs. 100 (to ascertain why an officer of the status of a Deputy Commissioner was posted",

ಅದನ್ನು ಮಂಡಿಸುತ್ತೇನೆ.

ಹಿಂದೆ ಮೈಸೂರು ಟ್ರ್ಯಾಫಿಕ್ ಬೋರ್ಡ್ ಎಂದಿದ್ದುದನ್ನು ಈಗ ಸ್ಟೇಟ್ ಟ್ರ್ಯಾನ್ಸ್‌ಪೋರ್ಟ್ ಅಥಾರಿಟಿ ಎಂದು ಮಾಡಿದ್ದಾರೆ. ಇಷ್ಟು ದಿವಸ ಅದಕ್ಕೆ ಒಬ್ಬ ಅಸಿಸ್ಟೆಂಟ್ ಕಮಿಷನರ ದರ್ಜೆಯವರು ಸೆಕ್ರೆಟರಿಯಾಗಿ ಕೆಲಸ ಮಾಡುತ್ತಿದ್ದರು. ಈಗ ಡೆಪ್ಯುಟಿ ಕಮಿಷನರ ದರ್ಜೆಯವರನ್ನು ಸೆಕ್ರೆಟರಿಯಾಗಿ ನೇಮಿಸಿದ್ದಾರೆ. ಬೇರೊಂದು ಪ್ರಶ್ನೆಯ ಸಂಬಂಧವಾಗಿ, ಮುದ್ರಣ ಮಾಡಿಸುವುದಕ್ಕೆ, ಸಿಬ್ಬಂದಿಯ ಖರ್ಚು ಹೆಚ್ಚಾಗುತ್ತದೆ, ರಿಟ್ರೆಂಚ್‌ಮೆಂಟ್ ಮಾಡಿದ್ದೇವೆ ಎಂದು ಮುಖ್ಯ ಮಂತ್ರಿಗಳು ಹೇಳಿದರು. ಆದರೆ ಇಲ್ಲಿ ನೋಡಿದರೆ ಈ ಸ್ಥಾನವನ್ನು ಅಸಿಸ್ಟೆಂಟ್ ಕಮಿಷನರವರ ಹುದ್ದೆಯಿಂದ ಡೆಪ್ಯುಟಿ ಕಮಿಷನರ ದರ್ಜೆಗೆ ಏರಿಸಿರುವುದನ್ನು ನೋಡಿದರೆ, ಹೇಳುವ ನೀತಿಗೂ ಅನುಸರಿಸತಕ್ಕ ಮಾರ್ಗಕ್ಕೂ ಬಹಳ ವ್ಯತ್ಯಾಸವಿರುವಂತೆ ಕಾಣುತ್ತದೆ. ಇದು ಸಮಂಜಸವಾಗಿಲ್ಲವೆಂಬುದನ್ನು ಸಭೆಯ ಗಮನಕ್ಕೆ ತರಲು ಈ ಖೋತಾ ನಿರ್ಣಯವನ್ನು ಸೂಚಿಸಿದ್ದೇನೆ

Mr. SPEAKER.—Cut motion moved:

"That the demand be reduced by Rs. 100".

ಶ್ರೀ ಕಡಿದಾಳ್ ಮಂಜಪ್ಪ (ರೆವೆನ್ಯೂ ಮತ್ತು ಮರಾಮತ್ತು ಶಾಖೆಗಳ ಮಂತ್ರಿಗಳು).—ಸ್ವಾಮಿ, ಸ್ಟೇಟ್ ಟ್ರಾನ್ಸ್‌ಪೋರ್ಟ್ ಶಾಖೆಯ ಆಡಳಿತ ತೃಪ್ತಿಕರವಾಗಿ ನಡೆಯಬೇಕೆಂಬ ಉದ್ದೇಶದಿಂದ ಈ ಅಧಿಕಾರಿಗಳನ್ನು ನೇಮಕಮಾಡಿದ್ದೇವೆ. ಇದರಲ್ಲಿ ಇನ್ನೇನೂ ಬೇರೆ ಅರ್ಥ ಮಾಡಬೇಕಾದ ಪ್ರಮೇಯವೇ ಇಲ್ಲ, ಕಾರಣವೇ ಇಲ್ಲ. ಎಕಾನಮಿ ಎಲ್ಲಿ ಮಾಡಬೇಕೋ ಅಲ್ಲಿ ಮಾಡಬೇಕು. ದೇಶದ ಹಿತಕ್ಕೆ ಎಲ್ಲಿ ಖರ್ಚುಮಾಡಬೇಕೋ ಅಲ್ಲಿ ಮಾಡಬೇಕೆಂಬುದು ಸರ್ಕಾರದ ಅಭಿಪ್ರಾಯ. ಈ ರೀತಿ ನುರಿತ ಡೆಪ್ಯುಟಿ ಕಮಿಷನರನ್ನು ಆ ಸ್ಥಳಕ್ಕೆ ನೇಮಕಮಾಡಿದರೆ, ಈ ಇಲಾಖೆಯ ಆಡಳಿತ ತೃಪ್ತಿಕರವಾಗಿ ನಡೆಯಬಹುದೆಂಬ ಸದುದ್ದೇಶದಿಂದ ನೇಮಕಮಾಡಿದೆಯೇ ವಿನಾ ಬೇರಾವ ಕಾರಣದಿಂದಲೂ ಅಲ್ಲವೆಂದು ಹೇಳುತ್ತೇನೆ.

Sri J. MOHAMED IMAM (Jagalur).—This seems to be a simple item. It involves one or two principles. In the first place the State Transport Department is not working profitably. If we see the Balance Sheet of the State Transport Department for the last two years we are hardly getting adequate or proportionate revenue for the amount we have invested.

Mr. SPEAKER.—It seems as though you are supporting the demand!

Sri J. MOHAMED IMAM.—When we are not getting adequate revenue it is quite necessary that we do not increase the expenditure in the State Transport Department. So I do not know under what circumstances the Government have posted as Deputy Commissioner. May be, they wanted to provide a certain gentleman with that post and posted him as Deputy Commissioner, Prior to his posting, the department was carrying on its work satisfactorily with an Assistant Commissioner but they have now posted a Deputy Commissioner, the department will have to incur an extra cost of nearly Rs. 400 a month.

Sri K. HANUMANTHAIYA (Chief Minister).—Secretary is also of the status of the Deputy Commissioner.

Sri J. MOHAMED IMAM.—Where is the necessity for the Secretary also to be of the status of the Deputy Commissioner? For the Secretary—a person of the status of the Assistant Commissioner would have been quite enough. Now this raises a suspicion because that the Government wanted to promote some gentleman to the cadre of the Deputy Commissioner, they have created an extra post. It means unnecessary extra expenditure, whereas the same work would have been carried out by an ordinary Assistant Commissioner. That is why we have to bring this cut motion. These are days of retrenchment and economy of expenditure. If the Government create extra post without proper ground then I think the financial position will be very bad.

Sri K. HANUMANTHAIYA.—May I say a few words Sir? My friend is off the mark. It has nothing to do with the State Transport System. The appointment does not refer to that. It refers to the Authority — that is the Committee. Now you kindly see, Sir, that this Board or Committee has been delegated with very many powers and we wanted that there should be a senior officer to exercise these powers. It is therefore to facilitate the proper and efficient working of that authority that a Deputy Commissioner has been posted. It is not the State Transport system on the revenue and expenditure of which my friend was speaking of. He is quite, a sport Sir. I thank you very much.

Sri Mulka GOVINDA REDDY.—I am not pressing the cut motion Sir, but

(SRI MULKA GOVINDA REDDY)

seek the leave of the House to withdraw it.

The cut motion was, by leave, withdrawn.

Mr. SPEAKER.—The cut motion which stands in the name of Sri M. Madiah to discuss matters relating to the administration of Transport Department is inadmissible for the reason that policy cannot be discussed on motions for additional grants.

The question is :

"That a supplementary sum not exceeding Rs. 7,500 be granted to the Government to defray the charges which will come in course of payment during the year ending 31st day of March 1953, in respect of "Charges on account of Motor Vehicles Acts."

The motion was adopted.

Demand No. 7.—Other Taxes and Duties

13.—Other Taxes and Duties.

Mr. SPEAKER.—Motion moved :

"That a supplementary sum not exceeding Rs. 19,200 be granted to the Government to defray the charges which will come in course of payment during the year ending 31st day of March 1953, in respect of 'Other Taxes and Duties' ".

Difficulties experienced by the Public in the course of collection of Sales Tax.

Sri B. NANJUNDAIYA (*Kora*).—Sir, I move my cut motion, which read as follows :

"That the Demand under the head "13. Other Taxes and Duties" for grant of Rs. 19,200, be reduced by Rs. 100. (To raise a debate on the difficulties experienced by the public in the course of collection of sales tax)".

ಸ್ವಾಮಿ, ಸೇಲ್ಸ್ ಟ್ಯಾಕ್ಸ್ ವಸೂಲಿ ಕ್ರಮದಿಂದ ಜನರಿಗೆ ಉಂಟಾಗುತ್ತಿರುವ ತೊಂದರೆಗಳನ್ನು ಸರ್ಕಾರದವರ ಗಮನಕ್ಕೆ ತರಲು ನಾನು ಮೊದಲನೆಯದಾಗಿ ಪ್ರಸ್ತಾಪ ಮಾಡಲಿಚ್ಛಿಸುತ್ತೇನೆ. ಸರ್ಕಾರದವರು ಯಾವುದಾದರೂ ಒಂದು ನಿರ್ದಿಷ್ಟವಾದ ಕಾನೂನನ್ನು ಮಾಡಿ, ಅದರ ಪ್ರಕಾರ ಜನರಿಂದ ಒಂದು ಕಂದಾಯವನ್ನು ವಸೂಲುಮಾಡಿದರೆ ಅದಕ್ಕೆ ಯಾರೂ ತಕರಾರುಮಾಡುವುದಿಲ್ಲ. ಸರ್ಕಾರಕ್ಕೂ ಕೂಡ ಹಾಗೆ ಒಂದು ಕಂದಾಯ ವಸೂಲು ಮಾಡತಕ್ಕ ಕ್ರಮದಲ್ಲಿ ವರ್ತಕರಿಗಾಗಲೀ ಅಥವಾ ಇತರ ತೆರಿಗೆದಾರರಿಗೇ ಆಗಲಿ ಒಂದು ತೊಂದರೆಯನ್ನುಂಟುಮಾಡಬೇಕೆಂಬ ಉದ್ದೇಶವಿರುವುದಿಲ್ಲ. ಆದರೆ ಈ ಮಧ್ಯೆ ಇರತಕ್ಕ ಸೇಲ್ಸ್ ಟ್ಯಾಕ್ಸ್ ಅಧಿಕಾರಿಗಳೂ ಮತ್ತು ಆ ಆಫೀಸಿನಲ್ಲಿ ಕೆಲಸಮಾಡತಕ್ಕ ನೌಕರರೂ ಅನುಸರಿಸುತ್ತಿರುವ ಒಂದು ರೀತಿ-ನೀತಿಯು ಆಚರಣೆ ಸರಿಯಾಗಿಲ್ಲ, ಅದು ತೀರ ಅಪಮಾನಕರವಾದುದ್ದಾಗಿದೆ. ಈ ಆಫೀಸಿರುಗಳಿರುವುದು ಕೇವಲ ಒಂದು ವಸೂಲಾತಿಗಾಗಿ ಮಾತ್ರವೇ ವಿನಾ ಅವರಲ್ಲಿ ನೀತಿ ನಡತೆಗಳೇ ಸರಿಯಾಗಿರುವುದಿಲ್ಲವೇನೋ ಎನ್ನುವ ಹಾಗೆ ತೋರಿಬರುತ್ತದೆ. ಅವರು ಆ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದಾರೆ. ವರ್ತಕತನ ಮಾಡತಕ್ಕವರೆಲ್ಲರೂ ಒಂದೇ ದರ್ಜೆಗೆ ಸೇರಿರತಕ್ಕವರಾಗಿರುವುದಿಲ್ಲ. ಈ ದಿವಸ ತಾವು ವಿಧಿಸಿರುವಂಥ ಸೇಲ್ಸ್ ಟ್ಯಾಕ್ಸ್ ಚಿಕ್ಕ ಪುಟ್ಟ ವರ್ತಕರ ಮೊದಲುಗೊಂಡು ದೊಡ್ಡ ದೊಡ್ಡ ವರ್ತಕರಿಗೆಲ್ಲರಿಗೂ ಅನ್ವಯಿಸತಕ್ಕದ್ದಾಗಿದೆ. ಅಷ್ಟೇ ಅಲ್ಲದೆ ಹೊಸದಾಗಿ ಈ ವರ್ತಕತನದ ಉದ್ಯೋಗಕ್ಕೆ ಬಂದಿರತಕ್ಕವರೂ ಇರುತ್ತಾರೆ. ಅಂಥವರೆಲ್ಲರಿಗೂ ಇದು ಅನ್ವಯವಾಗುವುದರಿಂದ ಈ ತೆರಿಗೆಯನ್ನು ವಸೂಲು ಮಾಡತಕ್ಕ ಅಧಿಕಾರಿಗಳು ಅವರ ಕಷ್ಟಗಳೇನು ಎಂಬುದನ್ನೇ ತಿಳಿದುಕೊಳ್ಳದೆ ಏಕ್‌ದಂ ಸುಮ್ಮನೆ ಅವರನ್ನೆಲ್ಲಾ ಹೆದರಿಸುವುದು ಮತ್ತೂ ಹಾಗೆ ಹೆದರಿಸಿ ಟ್ಯಾಕ್ಸ್ ವಸೂಲಿಮಾಡುವುದೊಂದೇ ಕೆಲಸ ವಿನಾ ಮತ್ತೊಂದು ಯಾವುದೂ ಅವರಿಗೆ ಗೊತ್ತಿದ್ದ ಹಾಗೆ ಕಂಡುಬರುವುದಿಲ್ಲ. ಏನೋ ಒಂದು ಖೂನಿ ಇತ್ಯಾದಿ ಭಾರಿ ಅಪರಾಧಮಾಡಿ ಪೋಲೀಸಿನವರ ಕೈಗೆ ಸಿಕ್ಕಿ ಬಿದ್ದ ಮನುಷ್ಯನನ್ನು ಹೇಗೆ ಒಂದು ಅಗೌರವದಿಂದ ನೋಡಲಾಗುತ್ತದೆಯೋ ಆ ರೀತಿಯಾಗಿ ಈ ಅಧಿಕಾರಿಗಳು ಅವರ ಕಛೇರಿಗೆ ಹೋಗತಕ್ಕ ವರ್ತಕರುಗಳನ್ನು ಕಾಣುತ್ತಿದ್ದಾರೆ. ಹೀಗೆ ಇವರು ತೋರಿಸುತ್ತಿರುವ ಧೋರಣೆಗೆ ಅವನು ಹೆದರಿ ಟ್ಯಾಕ್ಸನ್ನು ಕೊಡಬೇಕು, ಇಲ್ಲವೇ ಆತನು ಕಳ್ಳಬಿದ್ದು ಎಲ್ಲಿಯಾದರೂ ತಲೆಮರೆಮಾಡಿಕೊಂಡು ಹೋಗಬೇಕಾದಂಥ ಪ್ರಸಂಗ ಬಂದಿದೆ. ಈ ರೀತಿಯ ನಿದರ್ಶನಗಳು ನಮ್ಮ ಕಣ್ಣೆದುರಿಗೆ ನಡೆದಿರತಕ್ಕದ್ದು ಅನೇಕವಾಗಿ ಕಂಡು ಬಂದಿದೆ. ಆದರೆ ಅವರು ಈ ರೀತಿ ವರ್ತಿಸಬಾರದು. ವರ್ತಕರು ಇಟ್ಟಿರತಕ್ಕ ಲೆಕ್ಕಪತ್ರಗಳ ರೀತಿ ನೀತಿ ಸರಿಯಾಗಿಲ್ಲದಿದ್ದರೆ, ಸರಿಯಾದ ವಿಧಾನವನ್ನು ತೋರಿಸಿ ಅದರಂತೆ ಇಡಬೇಕೆಂದು ಹೇಳಲಿ. ಹಾಗೆ ಅವರು ನಿರ್ದಿಷ್ಟವಾದ ತಿಳುವಳಿಕೆಗಳನ್ನು ಕೊಟ್ಟ ಮೇಲೂ, ಆ ವರ್ತಕ ಹಾಗೆ ನಿರ್ದಿಷ್ಟವಾದ ರೀತಿಯಲ್ಲಿ ಲೆಕ್ಕಪತ್ರಗಳನ್ನಿಡದೆ ತಪ್ಪುದಾರಿಗೆ ಹೋದರೆ ಅಂಥವರ ಮೇಲೆ ನ್ಯಾಯವಾದ ರೀತಿಯಲ್ಲಿ ಕ್ರಮಜರುಗಿಸಿ ಅವರಿಗೆ ಶಿಕ್ಷೆವಿಧಿಸಿ; ನಾವು ಬೇಡವೆಂದು ಹೇಳುವುದಿಲ್ಲ. ಆದರೆ ಹಾಗೆ ತಿಳುವಳಿಕೆಗಳೇನನ್ನೂ ಕೊಡದೆ ಸುಮ್ಮನೆ ದುಡ್ಡು ಒಂದನ್ನು ಮಾತ್ರವೇ ವಸೂಲಿಮಾಡುವುದಕ್ಕಾಗಿ ಅವರನ್ನಿಡಲಾಗಿದೆಯೆಂಬ ಮನೋಭಾವದಿಂದಲೇ ಅವರು ವರ್ತಿಸುತ್ತಿರುವುದು ಸರ್ವಥಾ ನ್ಯಾಯವಾದದ್ದಲ್ಲ.

ಮತ್ತೊಂದು ವಿಚಾರವೇನೆಂದರೆ, ತಾವು ಈ ಸೇಲ್ಸ್ ಟ್ಯಾಕ್ಸ್ ಇಲಾಖೆಗೆ ನೌಕರರನ್ನೂ ಮತ್ತು ಅಧಿಕಾರಿಗಳನ್ನೂ ಆರಿಸಿಕೊಳ್ಳುವುದರ ಬಗ್ಗೆ ಯಾವುದೋ ಇಲಾಖೆಗಳಲ್ಲಿ ಕೆಲಸಮಾಡುತ್ತಿದ್ದಂಥವರನ್ನೆಲ್ಲಾ ಈ ಇಲಾಖೆಗೆ ವರ್ಗಮಾಡಿರುವುದರಿಂದ ಈ ಇಲಾಖೆಯ ಆಡಳಿತದ ಬಗ್ಗೆ ಅವರಿಗೆ ಏನುಮಾಡಬೇಕೆಂಬುದೇ ಅರ್ಥವಾ

ಗದಿರುವಾಗ ಅವರು ವರ್ತಕರಿಗೆ ತಾನೆ ಇನ್ನೇನು ತಿಳುವಳಿಕೆ ಕೊಡಬಲ್ಲರು? ಅವರಿಗೇ ಈ ಬಾಬಿನ ಲೆಕ್ಕಾಚಾರಗಳು ಅರ್ಥವಾಗದಿರುವುದರಿಂದ ಈ ಹೊಸ ಕಾನೂನು ಜಾರಿಗೆ ಬಂದಿರುವುದನ್ನು ವರ್ತಕರಿಗೂ ಅರ್ಥಮಾಡಿಕೊಳ್ಳಲು ಬಹಳ ತೊಂದರೆಯಾಗಿರುತ್ತದೆ. ಹೀಗೆ ಈ ದಿವಸ ವರ್ತಕರು ಅನುಭವವಿಲ್ಲದ ಅಧಿಕಾರಿಗಳ ಕೈ ಹಿಡಿತಕ್ಕೆಸಿಕ್ಕಿ, ಅವರು ಕೇಳಿದಷ್ಟು ಟ್ಯಾಕ್ಸನ್ನು ಕೊಟ್ಟು ಊರಲ್ಲಿರಬೇಕು, ಇಲ್ಲವೇ ಕದ್ದು ಎಲ್ಲಿಗಾದರೂ ಓಡಿಹೋಗಬೇಕು, ಹೀಗಾಗಿದೆ. ಅದಕ್ಕಾಗಿ ತಾವು ಇಂಥ ಉದ್ಯೋಗಕ್ಕೆ ಬರತಕ್ಕ ಅಧಿಕಾರಿಗಳಿಗೆ ಸರಿಯಾದ ವರ್ತಕರಲ್ಲಾಗಲಿ ಅಥವಾ ಮತ್ತೊಂದು ಸಂಸ್ಥೆಯಲ್ಲಾಗಲಿ ಕೆಲವು ಕಾಲ ಬಿಟ್ಟು ಅವರಿಗೆ ಸರಿಯಾಗಿ ಒಂದು ಶಿಕ್ಷಣ ಕ್ರಮವನ್ನು ಒದಗಿಸಿದರೆ ಆಗ ಕೆಲಸ ಕಾರ್ಯಗಳು ಸುಲಲಿತವಾಗಿ ನಡೆಯಬಹುದೇ ಹೊರತು ಇಲ್ಲದಿದ್ದರೆ ವರ್ತಕರಿಗೂ ತೊಂದರೆ, ಅತ್ತಲಾಗಿ ತಮಗೂ ಸಹ ಸರಿಯಾಗಿ ಹಣ ವಸೂಲಾಗುವುದಿಲ್ಲ. ಆದರೆ ಈ ದಿವಸ ಇಟ್ಟಿರತಕ್ಕ ಅಧಿಕಾರಿಗಳು ನಡೆಸುತ್ತಿರುವ ವರ್ತನೆಯನ್ನು ನೋಡಿದರೆ, ವರ್ತಕರು ಆ ಆಫೀಸಿನ ಬಳಿ ಹೋದರೋ ಇಲ್ಲವೋ ಆ ಕೂಡಲೇ "ಏನೋ ಕಳ್ಳ ಲೆಕ್ಕ ಇಟ್ಟು ದುಡ್ಡು ಹೊಡೆಯಲಿಕ್ಕೆ ಪ್ರಯತ್ನ ಮಾಡಿದ್ದೀಯಾ" ಎನ್ನುತ್ತ ಮಾತನ್ನು ಪ್ರಾರಂಭಿಸಿ ಅವರು ದುಡ್ಡನ್ನು ವಸೂಲುಮಾಡಬೇಕೆಂದಿರುವ ಹಾಗೆ ಕಾಣುತ್ತದೆ.

ಮತ್ತೊಂದು ವಿಚಾರವೇನೆಂದರೆ—ಒಂದೊಂದು ವರ್ಷ ಒಬ್ಬೊಬ್ಬ ಸೇಲ್ಸ್‌ಟ್ಯಾಕ್ಸ್ ಅಧಿಕಾರಿ ಒಂದೊಂದು ನಮೂನೆಯಲ್ಲಿ ಲೆಕ್ಕಗಳನ್ನಿಡಬೇಕೆಂದು ವರ್ತಕರಿಗೆ ಒತ್ತಾಯ ಮಾಡುತ್ತಿದ್ದಾರೆ. ಹೀಗೆ ಒಬ್ಬೊಬ್ಬರ ಕಾಲಕ್ಕೇ ಒಂದೊಂದು ರೀತಿಯಾಗಿ ಲೆಕ್ಕಗಳನ್ನಿಡಬೇಕೆಂದರೆ ಇದು ಎಷ್ಟರಮಟ್ಟಿಗೆ ಸಾಧ್ಯ ಮತ್ತು ಇದು ಎಂಥ ನೀತಿಯೆಂಬುದನ್ನು ನಾನು ಹೆಚ್ಚಿಗೆ ಹೇಳಬೇಕಾಗಿಲ್ಲ. ಒಬ್ಬ ಬಂದು ಒಬ್ಬ ವರ್ತಕನಿಗೆ 'ನೀನು ದಿನ ಲೆಕ್ಕಗಳನ್ನೇನೂ ಇಡತಕ್ಕದ್ದು ಬೇಕಾಗಿಲ್ಲ' ಎಂದು ಹೇಳಿಹೋದರೆ ಮತ್ತೊಬ್ಬ ಅಧಿಕಾರಿ ಬಂದು, 'ಇಲ್ಲ, ನೀನು ಪ್ರತಿ ದಿನದ ಜಮಾ, ಶಿಲ್ಕು, ಖರ್ಚುಗಳೆಲ್ಲವನ್ನೂ ಲೆಕ್ಕ ಇಡಬೇಕು' ಎಂದು ಹೇಳುತ್ತಿದ್ದರೆ, ಹೀಗೆ ವರ್ತಕನಾದವನಿಗೆ ಅದರಲ್ಲೂ ಈರುಳ್ಳಿ, ಬೆಳ್ಳುಳ್ಳಿ, ಇತ್ಯಾದಿ ಚಿಲ್ಲರೆ ಸಾಮಾನುಗಳನ್ನು ಮಾರಾಟಮಾಡತಕ್ಕ ವರ್ತಕನಿಗೆ ದಿನವಹಿ ಒಂದು ಸ್ಟೇಟ್‌ಮೆಂಟನ್ನಿಡಬೇಕೆಂದರೆ ಅದು ಸಾಧ್ಯವೇ? ಮತ್ತೊಬ್ಬ ಅಧಿಕಾರಿ ಬಂದಾಗ ಆತ ಹೀಗೇನಾದರೂ ದಿನವಹಿ ಜಮಾ ಖರ್ಚುಗಳನ್ನಿಟ್ಟಿದ್ದರೆ, ಇದು ಸರಿಯಾಗಿಲ್ಲ, ಒಟ್ಟು ಎಷ್ಟು ಸಾವಿರ ರೂಪಾಯಿ ವ್ಯಾಪಾರ ಮಾಡುತ್ತೀರೋ ಆ ಬಗ್ಗೆ ಲೆಕ್ಕಗಳನ್ನಿಟ್ಟರೆ ಸಾಕೆಂದು ಹೇಳುತ್ತಿದ್ದಾರೆ. ಹೀಗೆ ದಿನಕ್ಕೊಂದು ಸಿಸ್ಟಂ ಹೇಳುತ್ತಾಹೋದರೆ ವರ್ತಕರಿಗೆ ಇದರಿಂದ ತುಂಬ ಕಿರುಕುಳವಾಗುತ್ತದೆ. ಹಿಂದೆ ಕೆಲವು ಬಾಬುಗಳಲ್ಲಿ ಈ ಟ್ಯಾಕ್ಸನ್ನು ಟೋಟಲ್ ಟರ್ನೋವರಿನ ಮೇಲೆ ವಿಧಿಸಲಾಗುತ್ತಿತ್ತು. ಈಗ ಹಾಗೆ ಮಾಡುವುದನ್ನು ಬಿಟ್ಟು ಒಂದೊಂದು ಐಟಂಗೂ ಟೋಟಲ್ ಟರ್ನೋವರ್ ಹಾಕುತ್ತ, ಅದರ ಮೇಲೆ ತೆರಿಗೆ ವಿಧಿಸುತ್ತಿದ್ದಾರೆ. ಹೀಗೆ ಮಾಡಿರುವುದರಿಂದ ಪರಿಣಾಮದಲ್ಲಿ ಏನಾಗಿರುತ್ತದೆಯೆಂದರೆ, ಯಾರಾದರೂ ಒಬ್ಬ ಒಂದು ಸಾವಿರ ರೂಪಾಯಿಗಳ ಒಂದು ಚಿನ್ನದ ಒಡವೆಯನ್ನು ಮಾಡಿಸಿ, ಅದಕ್ಕೆ 7–8 ರೂಪಾಯಿಗಳ ಕೂಲಿಯನ್ನು ಕೊಟ್ಟಿದ್ದರೆ, ಅಂಥಾ 7–8 ರೂಪಾಯಿಗಳ ಕೂಲಿ ಮೇಲೆ ವಿಧಿಸತಕ್ಕ ಟ್ಯಾಕ್ಸ್ 15 ರೂಪಾಯಿಗಳಿಗೂ ಮೀರಿರುತ್ತದೆ. ಆದರೆ ವರ್ತಕರಾಗಿರತಕ್ಕವರೆಲ್ಲರೂ ಮೋಸ ಮಾಡುವುದಕ್ಕೆ ಹೋಗುವುದಿಲ್ಲ. ಎಲ್ಲೋ ಒಬ್ಬಿಬ್ಬರಿರಬಹುದು, ಅಂಥವರು. ಆದ್ದರಿಂದ ಈ ಇಲಾಖಾ ಅಧಿಕಾರಿಗಳು ವರ್ತಕರನ್ನು ಅವರ ಕಾನ್ಫಿಡೆನ್ಸಿಗೆ ತೆಗೆದುಕೊಂಡು ಕೆಲಸ ನಡೆಸಬೇಕು. ಎಲ್ಲರೂ ಕಳ್ಳರೆಂದು ಹೇಳುವುದಕ್ಕಾಗುವುದಿಲ್ಲ. ವರ್ತಕರಿಗೆ ಕೇಳತಕ್ಕ ವಿಷಯಗಳ ಬಗ್ಗೆ ಸಾಕಷ್ಟು ಸಮಾಧಾನಕರವಾದ ಸಮಜಾಯಿಷಿಕೊಟ್ಟು ಅವರನ್ನು ಸಮಾಧಾನಗೊಳಿಸಿ, ಅವರಿಗೆ ಸಲ್ಲತಕ್ಕ ಗೌರವವನ್ನು ಕೊಟ್ಟು ಕೆಲಸಮಾಡಲಿ. ಎಷ್ಟು ದುಡ್ಡನ್ನಾದರೂ ವಸೂಲುಮಾಡಿಕೊಳ್ಳಲಿ. ಅದಕ್ಕೆ ನಾನು ಬೇಡವೆಂದು ಹೇಳುತ್ತಿಲ್ಲ. ಆದರೆ ಮುಖ್ಯವಾಗಿ ಅವರಿಗೆ ಸಲ್ಲಬೇಕಾದ ಗೌರವವನ್ನು ಕೊಟ್ಟೇ ಕೊಡಬೇಕು. ಈರೀತಿ ಒಂದು ಸರಿಯಾದ ವ್ಯವಸ್ಥೆಯನ್ನು ಸರ್ಕಾರದವರು ತಕ್ಷಣ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಕಡೆಯದಾಗಿ ಎಲ್ಲೆಲ್ಲಿ ಈ ಇಲಾಖಾ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುವುದಿಲ್ಲವೋ ಅಂಥವರನ್ನು ಆ ಸ್ಥಳದಿಂದ ಬೇರೆ ಕಡೆಗೆ ವರ್ಗಮಾಡಿದರೆ ಅವರಿಗೆ ಶಿಕ್ಷೆ ಸಾಲದು. ಅವರಿಗೆ ಕೊಡತಕ್ಕಂಥ ಶಿಕ್ಷೆ ಹೇಗಿರಬೇಕೆಂದರೆ ಮುಂದೆ ಆ ಸ್ಥಳಕ್ಕೆ ಬರತಕ್ಕವರಿಗೆ ಇದರ ಬಿಸಿ ಗೊತ್ತಾಗುವಂಥ ಶಿಕ್ಷೆಯಾಗಬೇಕು. ಒಟ್ಟಿನಲ್ಲಿ ತಾವು ಈ ಬಾಬಿನಲ್ಲಿ ವರ್ತಕರ ವಿಚಾರದಲ್ಲಿ ಅಧಿಕಾರಿಗಳು ಒಂದು ಗೌರವರೀತಿಯಲ್ಲಿ ನಡೆದುಕೊಂಡು, ಇಂದು ತಪ್ಪು ಮಾಡಿದವರು ಮುಂದೆ ಅಂಥ ತಪ್ಪು ಮಾಡಲು ಅವಕಾಶವಿಲ್ಲದಂಥ ಒಂದು ನಿರ್ದಿಷ್ಟವಾದ ಕಾರ್ಯಕ್ರಮವನ್ನು ಕೈಕೊಳ್ಳುತ್ತಾರೆಂಬ ಹೆದರಿಕೆ ಮುಂದೆ ಬರತಕ್ಕವರಿಗೂ ಉಂಟಾಗತಕ್ಕ ರೀತಿ ಏರ್ಪಾಡಾಗಬೇಕೆಂದು ತಿಳಿಸಿ ನಾನು ಈ ಖೋತಾ ಸೂಚನೆಯನ್ನು ಸಭೆಯವರ ಅನುಮತಿಗಾಗಿ ಸಭೆಯ ಮುಂದಿಡುತ್ತೇನೆ.

Mr. SPEAKER.—Cut motion moved:

"That the demand be reduced by Rs. 100".

ಶ್ರೀ ಟಿ. ಎನ್. ಮೂಡಲಗಿರಿಗೌಡ (ಕುಣಿಗಲ್).—ಸ್ವಾಮಿ, ಈಗತಾನೆ ಮಾತನಾಡಿದ ಶ್ರೀ ಬಿ. ಸಿ. ನಂಜುಂಡಯ್ಯನವರು ವರ್ತಕರನ್ನು "ಗೌರವದಿಂದ" ನೋಡುವಂತೆ ಮಾಡಬೇಕೆಂದು ಹೇಳಿರತಕ್ಕ ಅಂಶವನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತೇನೆ ಮತ್ತು ಅದಕ್ಕೆ ನಾನು ಮನ್ನಣೆಯನ್ನೂ ಕೊಡುತ್ತೇನೆ. ಹಾಗೆ ಮಾಡದಿರುವುದು ಒಂದು ದೊಡ್ಡ ಲೋಪವೆಂದೇ ಹೇಳಬೇಕಾಗಿದೆ. ಈ ಸೇಲ್ಸ್‌ಟ್ಯಾಕ್ಸ್ ಇಲಾಖೆಯಲ್ಲಿ ಸೇಲ್ಸ್‌ಟ್ಯಾಕ್ಸ್ ಆಫೀಸರು ಮತ್ತು ಅಸಿಸ್ಟೆಂಟ್ ಸೇಲ್ಸ್‌ಟ್ಯಾಕ್ಸ್ ಆಫೀಸರು ಎಂಬುದಾಗಿ ಎರಡು ದರ್ಜೆಯ ಅಧಿಕಾರಿಗಳನ್ನು ಕೆಲಸಕ್ಕೆ ನೇಮಕ ಮಾಡಲಾಗಿದೆ. ಹೀಗೆ ವಿಧಾಯಕವಾಗಿರತಕ್ಕ ಇಬ್ಬರೂ ಒಂದೇಕಡೆ ಸೇರಿ ಕೆಲಸನಡೆಸಬೇಕಾಗಿದೆ. ಆದರೆ ಈಗಿರತಕ್ಕ ರೀತಿಯಲ್ಲಿ ಇದು ವ್ಯತ್ಯಾಸವಾಗಿದೆ. ಒಂದೊಂದು ಸರಹದ್ದಿಗೆ ಚೀಫ್ ಸೇಲ್ಸ್‌ಟ್ಯಾಕ್ಸ್ ಆಫೀಸರನ್ನೂ ಮತ್ತೆ ಕೆಲವು ಸರಹದ್ದಿಗೆ ಅಸಿಸ್ಟೆಂಟ್ ಸೇಲ್ಸ್‌ಟ್ಯಾಕ್ಸ್ ಆಫೀಸರನ್ನೂ ನೇಮಕಮಾಡಲಾಗಿದೆ. ಆದರೆ ಈ ಅಸಿಸ್ಟೆಂಟ್ ಸೇಲ್ಸ್‌ಟ್ಯಾಕ್ಸ್ ಅಧಿಕಾರಿಗಳು ಯಾವಾಗ್ಲೂ ಕೆಲಸವನ್ನು ಚೀಫ್ ಸೇಲ್ಸ್‌ಟ್ಯಾಕ್ಸ್ ಅಧಿಕಾರಿಗಳ ಕೈಕೆಳಗೆ ಮಾಡುತ್ತಿಲ್ಲವಾಗಿದೆ. ಹೀಗೆ ಇರುವುದರಿಂದ ಈ ದಿವಸ ನಮಗೆ ಬರಬೇಕಾಗಿರತಕ್ಕ ರೆವಿನ್ಯೂ ಸರಿಯಾಗಿ ವಸೂಲಾಗುತ್ತಿಲ್ಲವೆಂದು ನಮ್ಮ ಗಮನಕ್ಕೆ ಬಂದಿದೆ. ಈ ಇಬ್ಬರು ಅಧಿಕಾರಿಗಳಿಗೂ ಜೂರಿಸ್ಡಿಕ್ಷನ್ (ಸರಹದ್ದು) ಒಂದೇ ಆಗಿರಬೇಕು. ಬೇರೆಬೇರೆ ಮಾಡಿರತಕ್ಕದ್ದು ಸರಿಯಾದ್ದಲ್ಲ. ಇದನ್ನು ತಪ್ಪಿಸಿ ಒಂದೊಂದು

(ಶ್ರೀ ಟಿ. ಎನ್. ಮುಡಲಗಿರಿಗೌಡ)

ಸರಹದ್ದೂ ಈ ಎರಡು ಜನರ ಕೈಲಿರುವಂತೆ ಮಾಡಬೇಕೆಂಬುದು ನನ್ನ ಮೊದಲನೆಯ ಸಲಹೆ.

ಇನ್ನು ಎರಡನೆಯದಾಗಿ, ಈ ಸೇಲ್ಸ್‌ಟ್ಯಾಕ್ಸನ್ನು ಯಾವರೀತಿ ಹಾಕಬೇಕು, ಯಾರ ಯಾರ ಮೇಲೆ ಹಾಕಬೇಕು, ಅದನ್ನು ಯಾವರೀತಿಯಲ್ಲಿ ವಸೂಲುಮಾಡಬೇಕು, ಎಂಬಿತ್ಯಾದಿ ವಿಷಯಗಳಿಗೆಲ್ಲಾ ತಾವು ಒಂದು ನಿರ್ದಿಷ್ಟವಾದ ಲೆಕ್ಕಗಳನ್ನಿಡುವ ಒಂದು ನಿಯಮವನ್ನು ಗೊತ್ತುಮಾಡಬೇಕು. ಯಾವಯಾವ ಕಾಲದಲ್ಲಿ ಯಾವ ಯಾವ ವರ್ತಕರು ಯಾವಯಾವ ರೀತಿ ಲೆಕ್ಕಗಳನ್ನಿಡಬೇಕೆಂಬ ಬಗ್ಗೆ ಒಂದು ಸೂಕ್ತ ಮಾರ್ಗವನ್ನು ಕಂಡುಹಿಡಿಯತಕ್ಕ ಬಗ್ಗೆ ತಾವು ಕಾರ್ಯಕ್ರಮವನ್ನು ಕೈಕೊಂಡು ಆ ಬಗ್ಗೆ ಪರಿಣತರ ಸಲಹೆ ಪಡೆಯುವುದು ಅಗತ್ಯವೆಂದು ನನಗೆ ತೋರುತ್ತದೆ. ಹೀಗೆ ಮಾಡಿ ಇದನ್ನು ತಾವು ಮೊದಲು ಕ್ರಮಪಡಿಸಬೇಕು. ಹೀಗೆ ಮಾಡಿದರೆ ಒಬ್ಬೊಬ್ಬ ಅಧಿಕಾರಿ ಬಂದಾಗ ಒಂದೊಂದು ರೀತಿಯಾಗಿ ಲೆಕ್ಕಗಳನ್ನಿಡಬೇಕೆಂದು ಹೇಳುವುದು ತಪ್ಪಿಹೋಗುತ್ತದೆ. ಇದರಿಂದ ವರ್ತಕರುಗಳಿಗೆ ಆಗುತ್ತಿರುವ ತೊಂದರೆ ತಪ್ಪುವುದರ ಜೊತೆಗೆ ತಮಗೆ ವಸೂಲಾಗಬೇಕಾದ ರೆವೆನ್ಯೂ ಸಹ ಸಲೀಸಾಗಿ ಬೇಗಬೇಗ ವಸೂಲಾಗಲು ಅನುಕೂಲವಾಗುತ್ತದೆ. ಇಂಥ ಒಂದು ನೀತಿಯನ್ನು ತಾವು ಮೊದಲು ನಿರ್ಧರಿಸಬೇಕೆಂದು ಸೂಚಿಸುತ್ತೇನೆ.

Sri M. PALANIYAPPAN (Ulsoor).—Sir, every time we have been saying that the Sales Tax Officers who come for checking the accounts of the merchant classes always treat them with contempt and illtreat them. They have got a sort of feeling towards the merchants as they are under the impression that they would present false accounts. Another thing is that they always insist upon maintaining accounts only in the Kannada language as well as in English language. But our accountants and other people know either Tamil, Telugu, Gujarati or other languages. It is difficult for them to maintain account in the English or Kannada language. Some people have come from outside; they have got a different kind of accounts. They just try to explain the whole account as clearly as possible to those officers, but they refuse to listen to them and they always insist upon maintaining accounts only in the Kannada or the English language. I think Government might have received some objection from Trade Unions. I request the Government to just consider and see that the merchants are not harassed by the Government Officers in maintaining accounts in one or the other language.

2 P.M.

* ಶ್ರೀ ಎಚ್. ಕೆ. ಶಿವರುದ್ರಪ್ಪ (ಗುಂಡ್ಲುಪೇಟೆ—ಹೆಗ್ಗಡದೇವನಕೋಟೆ).—ಸ್ವಾಮಿ, ಈ ಖೋತಾ ನಿರ್ಣಯದ ವಿಚಾರದಲ್ಲಿ ಶ್ರೀ ಎಮ್. ಪಳನಿಯಪ್ಪನ್‌ರವರು ಹೇಳಿದ ಅಂಶವನ್ನೇ ಸಮರ್ಥಿಸುತ್ತಾ, ಯಾವ ಭಾಷೆಯಲ್ಲಿ ಲೆಕ್ಕಗಳನ್ನು ಒಪ್ಪಿಸಬೇಕೆಂದು ಸರ್ಕಾರದವರು ನಿಗದಿ ಮಾಡಿದ್ದಾರೋ ಮತ್ತು ಯಾವ ಕ್ರಮದಲ್ಲಿಡಬೇಕೆಂದು ಹೇಳಿದ್ದಾರೋ ಅದು ವ್ಯಾಪಾರಸ್ಥರಿಗೆ ಬಹಳ ಅನ್ಯಾಯವನ್ನುಂಟುಮಾಡುವುದಾಗಿದೆ ಮತ್ತು ಅವರನ್ನು ಬಹಳ ತೊಂದರೆಗೀಡುಮಾಡಿದೆಯೆಂದು ಈ ಸಭೆಯ ಗಮನಕ್ಕೆ ತರಬಯಸುತ್ತೇನೆ. ಈಗಿರುವ ಕಾನೂನಿನ ಪ್ರಕಾರ ಇಂಗ್ಲೀಷು ಅಥವಾ ಕನ್ನಡದಲ್ಲಿ ಲೆಕ್ಕಗಳನ್ನಿಡಬೇಕೆಂದು ಹೇಳಿದೆ. ಪರಪ್ರಾಂತ್ಯಗಳಿಂದ ಇಲ್ಲಿಗೆ ಬಂದ ಬಂಡವಾಳಸ್ಥರಿಗೆ ಈ ಎರಡು ಭಾಷೆಗಳೂ ಬಾರದೆಯಿದ್ದರೆ ಅವರು ತಮ್ಮ ಸ್ವಂತ ಭಾಷೆಯಾದ ಗುಜರಾತಿಯಲ್ಲೋ ಮಲೆಯಾಳಿಯಲ್ಲೋ ಲೆಕ್ಕಗಳನ್ನಿಡುವುದು ಅವರ ಸಂಪ್ರದಾಯವಾಗಿದೆ. ಹಾಗಿಲ್ಲದಿದ್ದರೆ ಅವರಿಗೆ ತಮ್ಮ ಲೆಕ್ಕಗಳನ್ನು ನೋಡಿಕೊಳ್ಳುವುದಕ್ಕಾಗಲಿ, ಅಥವಾ ಬೇರೆಯವರಿಗೆ ಸಮಜಾಯಿಷಿ ಕೊಡುವುದಕ್ಕಾಗಲಿ ಆಗದೆ ತೊಂದರೆಗೀಡಾಗುವ ಸಂದರ್ಭ ತಲೆದೋರುತ್ತದೆ. ಅಂಥ ಸಂದರ್ಭದಲ್ಲಿ ಅವರು ಸ್ಥಳದ ಭಾಷೆಯಲ್ಲೇ ಇಡಬೇಕೆಂದರೆ ಸಹಜವಾಗಿಯೂ ಅನ್ಯಾಯವೆಂದು ನನಗೆ ತೋರುತ್ತದೆ. ಈಗ ಏನಾಗುತ್ತಿದೆಯೆಂದರೆ ಆ ಲೆಕ್ಕಗಳನ್ನು ತೆಗೆದುಕೊಂಡು ಹೋಗಿ ಸೇಲ್ಸ್‌ಟ್ಯಾಕ್ಸ್ ಆಫೀಸರುಗಳ ಮುಂದಿಟ್ಟಾಗ, ಅವರು "ಕಾನೂನಿನ ಪ್ರಕಾರ ಈ ಲೆಕ್ಕಗಳು ಕನ್ನಡ ಅಥವಾ ಇಂಗ್ಲೀಷಿನಲ್ಲಿಲ್ಲ, ಆದ್ದರಿಂದ ನೀವು ಲೆಕ್ಕವನ್ನೇ ಕೊಡಲಿಲ್ಲವೆಂದು ಭಾವಿಸುತ್ತೇವೆ, ನಿಮಗೆ ಸರ್‌ಚಾರ್ಜ್ ಮಾಡುತ್ತೇವೆ ಇಲ್ಲವೇ ಎಕ್ಸ್‌-ಪಾರ್ಟಿಯಾಗಿ ಟ್ಯಾಕ್ಸ್ ಹಾಕುತ್ತೇವೆ, ಅದನ್ನು ನೀವು ಕೊಟ್ಟುಬಿಡಬೇಕೆ" ಎಂದು ಹೇಳಿದ ಸಂದರ್ಭಗಳು ಮೈಸೂರು ಸರ್ಕಾರದಲ್ಲಿ ಅನೇಕವಾಗಿವೆ. ಇದು ನಿಜವಾಗಿಯೂ ಬಹಳ ಅನ್ಯಾಯ. ಇಂಥ ಅನ್ಯಾಯಗಳಿಂದ ಎಷ್ಟು ತೊಂದರೆಯಾಗುತ್ತದೆ! ಅವನಿಗೆ ಅಪೀಲು ತೆಗೆದುಕೊಂಡು ಬಾ ಅಥವಾ ಬೇರೆ ಕನ್ನಡದಲ್ಲಿ ಬರೆಸಿಕೊಂಡು ಬಾ ಎಂದು ಹೇಳಿದರಾದರೂ ನ್ಯಾಯ. ಆ ರೀತಿಯಾಗಿಯೂ ಹೇಳದೆ 'ನಿಮ್ಮ ಲೆಕ್ಕವನ್ನು ನೋಡುವುದೇ ಇಲ್ಲ, ಕಾನೂನು ಪ್ರಕಾರ ಬಂದಿಲ್ಲವೆಂದು ಹೇಳಿಬಿಟ್ಟು ಟ್ಯಾಕ್ಸ್ ಹಾಕುತ್ತೇವೆಂದರೆ ಆತನಿಗೆಷ್ಟು ಕಷ್ಟವಾಗುತ್ತದೆಂಬುದನ್ನು ಹೇಳಬೇಕಾಗಿಲ್ಲ. ಇಂಥ ಎರಡು-ಮೂರು ಸಂದರ್ಭಗಳು ನನ್ನ ಗಮನಕ್ಕೆ ಬಂದಿವೆ. ಆ ಸಂದರ್ಭಗಳಲ್ಲಿ ಅಪೀಲು ತೆಗೆದುಕೊಂಡು ಹೋಗಬೇಕಾಗಿ ಬಂದು ಒಂದುಕಡೆ ಲಾಯರಿಗೆ ಬೇರೆ ಹಣ ಕೊಡಬೇಕಾಯಿತು. ಇದರಿಂದ ಬೇರೆ harassment ಉಂಟಾಗುತ್ತಿದೆ; ಟ್ಯಾಕ್ಸ್ ಬೇರೆ ಕೊಡಬೇಕಾಗುತ್ತದೆ. ದಯವಿಟ್ಟು ಈ ಕಷ್ಟವನ್ನು ತಪ್ಪಿಸಿ, ಈ ನ್ಯೂನತೆಯನ್ನು ಸರಿಪಡಿಸಬೇಕೆಂದು ಹೇಳುತ್ತೇನೆ.

*ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಅಧ್ಯಕ್ಷರೇ, ಸೇಲ್ಸ್‌ಟ್ಯಾಕ್ಸ್ ವಿಚಾರದಲ್ಲಿ ಎಷ್ಟು ತೊಂದರೆಗಳಾಗುತ್ತಿವೆಯೆಂದು ಅನೇಕ ಸಾರಿ ಸರ್ಕಾರದವರ ಗಮನಕ್ಕೆ ತಂದಿದ್ದೇವೆ. ಇದರಿಂದಾಗಿ ಅನೇಕ ಚಿಲ್ಲರೆ ವರ್ತಕರು ತಮ್ಮ ಉದ್ಯಮವನ್ನೇ ಬಿಟ್ಟುಬಿಟ್ಟಿರುವುದೂ ಉಂಟು. ಸರ್ಕಾರದವರು ರೈತರನ್ನು ಹೇಗೆ ದೇಶದ ಬೆನ್ನುಮೂಳೆಯೆಂದು ಭಾವಿಸುತ್ತಾರೋ ಹಾಗೆಯೇ ವರ್ತಕರನ್ನು ಸಮಾಜದ ಬೆನ್ನುಮೂಳೆಯೆಂದು ಭಾವಿಸಬೇಕು. ನಾನು ದಿನಚರಿ ವರ್ತಕರ ಸಂಬಂಧವಿಟ್ಟುಕೊಂಡಿರುವುದರಿಂದ ನಾನು ಸ್ವತಃ ನೋಡಿ ತಿಳಿದವನಾಗಿ ಈ ಅಭಿಪ್ರಾಯವನ್ನು ಹೇಳ

ಬೇಕಾಗಿದೆ. ಹಿಂದೆಯೂ ಅನೇಕ ಸಾರಿ ಅವರ ಕಷ್ಟಗಳನ್ನು ಸರ್ಕಾರದವರ ಗಮನಕ್ಕೆ ತಂದಿದ್ದೇನೆ. ಈ ತೊಂದರೆಗಳೆಲ್ಲದರ ನಿವಾರಣೆಗಾಗಿ ಇರುವ ಒಂದು ಸಿದ್ಧೌಷಧವೆಂದರೆ ಸಿಂಗಲ್‌ಪಾಯಿಂಟ್ ಟ್ಯಾಕ್ಸ್ ಹಾಕುವುದು. ಹಾಗಿಲ್ಲದಿದ್ದರೆ, ಬೆಂಗಳೂರಿನಿಂದ ಮಾಗಡಿಗೆ ಯಾವನಾದರೂ ಜವಳಿ ತೆಗೆದುಕೊಂಡು ಹೋಗಬೇಕೆಂದರೆ ಅವನು ಇಲ್ಲೊಂದು ಬಾರಿ ಸೇಲ್ಸ್ ಟ್ಯಾಕ್ಸ್ ಕೊಡಬೇಕು, ಮತ್ತೆ ಮಾಗಡಿಯಲ್ಲಿ ಬೇರೆ ಸೇಲ್ಸ್‌ಟ್ಯಾಕ್ಸ್ ಕೊಡಬೇಕು. ರೈತರನ್ನು ಉದ್ಧಾರ ಮಾಡುತ್ತೇವೆಂದು ಹೇಳುವ ನೀವು ಆ ರೈತ ಅವನು ಕೊಂಡುಕೊಳ್ಳುವ ಜವಳಿಗೆ 2-3 ಬಾರಿ ಸೇಲ್ಸ್‌ಟ್ಯಾಕ್ಸ್ ಕೊಡಬೇಕಾಗುವಂತೆ ಮಾಡಿದರೆ ಆತ ಎಷ್ಟು ತೊಂದರೆಪಡಬೇಕಾಗುತ್ತದೆಂಬುದನ್ನು ಯೋಚನೆಮಾಡಿ. ತತ್ರಾಪಿ ಬಾಳೆಹಣ್ಣು, ಸಿಗರೇಟು ಮಾರುವ ಚಿಲ್ಲರೆ ವರ್ತಕರ ಕಷ್ಟ ಹೇಳತೀರದು. ಅವನಿಗೆ ಸೇಲ್ಸ್‌ಟ್ಯಾಕ್ಸ್ ಇಲಾಖೆಯವರು ಗೊತ್ತುಮಾಡಿರುವ ನಮೂನೆಯಲ್ಲಿ ಲೆಕ್ಕವಿಡಬೇಕೆಂದು ಗೊತ್ತುಮಾಡುವುದಾದರೆ, ಅದು ಅವನಿಂದ ಸಾಧ್ಯವೇ ಎಂಬುದು ಸರ್ಕಾರದ ಅಧಿಕಾರ ವರ್ಗಕ್ಕೆ ಗೊತ್ತಿರುವ ವಿಷಯ. ಆದ್ದರಿಂದ ಸರ್ಕಾರದವರು ಈ ಅಂಶವನ್ನು ದೀರ್ಘವಾಗಿ ಆಲೋಚನೆಮಾಡಿ ಈ ಕಿರುಕುಳವನ್ನು ತಪ್ಪಿಸುವಂತೆ ಒಂದು ವ್ಯವಸ್ಥೆ ಮಾಡಬೇಕು.

ಇನ್ನೊಂದು ವಿಷಯವೇನೆಂದರೆ, ತಾವು ಸೇಲ್ಸ್ ಟ್ಯಾಕ್ಸ್ ಆಫೀಸರುಗಳನ್ನು ನೇಮಕ ಮಾಡುವುದರಲ್ಲಿ ಸರಿಯಾಗಿ ಲೆಕ್ಕಗಳನ್ನು ನೋಡುವುದರಲ್ಲಿ ಪರಿಶ್ರಮವಿರುವ ಟ್ರೈನಿಂಗ್ ಆಗಿರತಕ್ಕವರನ್ನೇ ಹಾಕಬೇಕು. ಹಾಗಿಲ್ಲದೆ ರೆವಿನ್ಯೂ ಇಲಾಖೆಯವರನ್ನು ತೆಗೆದುಕೊಂಡು ಹೋಗಿ ಸೇಲ್ಸ್‌ಟ್ಯಾಕ್ಸ್ ಇಲಾಖೆಗೆ ಹಾಕಿದರೆ, ಅವರಿಗೆ ಯಾವರೀತಿ ಲೆಕ್ಕಗಳನ್ನು ಇಡಬೇಕೆಂದು ಗೊತ್ತಾಗಿರುವುದಿಲ್ಲ. ಆದ್ದರಿಂದ ಸರ್ಕಾರದವರು ಅಕೌಂಟ್ಸ್ ವಗೈರೆಗಳಲ್ಲಿ ಅರ್ಹತೆಯಿರುವವರನ್ನು ನೇಮಕಮಾಡುವ ವ್ಯವಸ್ಥೆ ಮಾಡಿದರೆ ಸೇಲ್ಸ್ ಟ್ಯಾಕ್ಸ್‌ನಿಂದ ಆಗುವ ಅನೇಕ ಕಿರುಕುಳಗಳು ಜನರಿಗೆ ತಪ್ಪುತ್ತದೆಂದು ಹೇಳಬಹುದು. ದೇಶದಲ್ಲಿ ಮೊದಲಿನಿಂದಲೂ ಪ್ರಜಾಸರ್ಕಾರ ಬರುವುದಕ್ಕೆ ವರ್ತಕರೂ ರೈತರೂ ಇಬ್ಬರೂ ಶ್ರಮವಹಿಸಿರುವುದು ಎಲ್ಲರಿಗೂ ಗೊತ್ತಿದೆ. ಹೇಗೆ ರೈತರಿಗೆ ಒಂದು ಕಾಸು ಹೋದರೆ ವ್ಯಥೆಪಡುತ್ತಾರೆಯೋ ಹಾಗೆ ವರ್ತಕರಿಗೂ ಆಗುತ್ತಿರುವ ತೊಂದರೆಯನ್ನು ಗಮನಕ್ಕೆ ತೆಗೆದುಕೊಂಡು ಅವರಿಗೆ ಏನೂ ಕಿರುಕುಳಗಳಾಗದ ರೀತಿಯಲ್ಲಿ ಈ ಸೇಲ್ಸ್ ಟ್ಯಾಕ್ಸನ್ನು ವಸೂಲುಮಾಡಬೇಕು. ಮತ್ತು ನಮೂನೆ ಫಾರಮ್ಮುಗಳನ್ನು ಗೊತ್ತುಮಾಡಿ ಪ್ರತಿಯೊಬ್ಬ ವರ್ತಕನಿಗೂ ಕೊಟ್ಟು ಇಂಥದೇ ರೀತಿಯಲ್ಲಿ ಬರೆಯಬೇಕೆಂದು ಗೊತ್ತುಮಾಡಿದರೆ ಒಳ್ಳೆಯದು. ಏಕೆಂದರೆ, ನಮೂನೆ ಫಾರಮ್ಮುಗಳಿಲ್ಲವೆಂದು ಹೇಳಿದ ಮೇಲೆ ಒಬ್ಬೊಬ್ಬ ಆಫೀಸರು ಒಂದೊಂದು ಸಾರಿ ಹೋಗಿ ಬೇರೆ ಬೇರೆ ರೀತಿಯಲ್ಲಿ ಲೆಕ್ಕವಿಡಬೇಕೆಂದು ಹೇಳುತ್ತಾರೆ. ಇದನ್ನು ಗಮನದಲ್ಲಿಟ್ಟುಕೊಂಡು ಸರ್ಕಾರದವರು ಸೂಕ್ತ ಪರ್ಯಾಲೋಚನೆ ನಡೆಸಿ, ಇದಕ್ಕೆಲ್ಲಾ ಸಿದ್ಧೌಷಧವಾದ ಸಿಂಗಲ್ ಪಾಯಿಂಟ್ ಟ್ಯಾಕ್ಸನ್ನು ಜಾರಿಗೆ ತಂದು ಸರ್ಕಾರದವರು ದೇಶದಲ್ಲಿ ಈಗ ಉಂಟಾಗಿರುವ ತೊಂದರೆಗಳನ್ನು ತಪ್ಪಿಸಬೇಕೆಂದು ಈ ಸಭೆಯ ಮೂಲಕ ಪ್ರಾರ್ಥಿಸುತ್ತೇನೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ (ಶಿವಮೊಗ್ಗ).—ಮಾನ್ಯ ಅಧ್ಯಕ್ಷರೇ, ಈ ಸೇಲ್ಸ್‌ಟ್ಯಾಕ್ಸ್ ವಿಚಾರದಲ್ಲಿ ಕೆಲವು ಅಧಿಕಾರಿಗಳು ಸುಮ್ಮಸುಮ್ಮನೆ ಅಂಗಡಿಗಳಿಗೆ ಹೋಗಿ 500 ರೂಪಾಯಿ, 1,000 ರೂಪಾಯಿಗಳ ಟ್ಯಾಕ್ಸ್ ಕೊಡಬೇಕೆಂದು ನೋಟೀಸು ಕೊಟ್ಟು ಆ ಅಂಗಡಿ ವರ್ತಕರನ್ನು ಮನೆಗೆ ಬರಮಾಡಿಕೊಂಡು, ಆಮೇಲೆ ಆಫೀಸಿಗೆ ಬಂದು ಲೆಕ್ಕ ಸಮಜಾಯಿಷಿ ಕೊಟ್ಟರೆ ಕಡಮೆಮಾಡುತ್ತೇವೆಂದು ಹೇಳಿ ಆಮೇಲೆ ಟ್ಯಾಕ್ಸನ್ನು ಕೇವಲ 150 ರೂಪಾಯಿಗಳಿಗೆ ಇಳಿಸಿರುವ ಸಂದರ್ಭಗಳಿವೆ. ಇದೆಲ್ಲಾ ಯಾವ ರೀತಿ ಪರಿಶೀಲನೆ ಮಾಡಲ್ಪಡುತ್ತವೆ, ಅವರು ಯಾವ ರೀತಿ ಹೀಗೆ ಹೆಚ್ಚಿಗೆ ಹೇಳಿ ಕೊನೆಗೆ ಕಡಮೆಮಾಡುತ್ತಾರೆ, ಅಪೀಲುಗಳನ್ನು ಎಲ್ಲಿ ಕೊಟ್ಟರೆ ಅಲ್ಲೇ ತೆಗೆದುಕೊಳ್ಳಬೇಕೇ---ಇವೊಂದೂ ಸರಿಯಾಗಿ ಗೊತ್ತಾಗುವುದಿಲ್ಲ. 50 ರೂಪಾಯಿಗಳನ್ನು ಅಥವಾ 100 ರೂಪಾಯಿಗಳನ್ನು ಪಡೆದು ಲೆಕ್ಕ ಸರಿಯಾಗಿದೆಯೆಂದು ಬರೆಯುವುದು, ಕೆಳಗಿನ ಅಧಿಕಾರಿಗಳು ಮೇಲಿನ ಅಧಿಕಾರಿಗಳ ಮನಸ್ಸನ್ನು ಪರಿವರ್ತನೆಯಾಗುವಂತೆ ಹೇಳಿಕೊಡುವುದು—ಹೀಗೆಲ್ಲಾ ನಡೆಯುತ್ತಿವೆ. ಮೊದಲು ಕೆಳಗಿನ ಅಧಿಕಾರಿಗಳಿಗೆ ಸಂಭಾವನೆ ಕೊಡದೆ ಸರಿಯಾಗಿ ಹೇಳದೆಯೆ ಮೇಲಿನ ಅಧಿಕಾರಿಗಳ ಗಮನಕ್ಕೆ ಹೋಗುವುದೇ ಇಲ್ಲ. ಎಷ್ಟೋವೇಳೆ ಸಮಯ ಸಂದರ್ಭ ನೋಡಿಕೊಂಡು ಯಾವುದೋ ಕಾಲದಲ್ಲಿ ಹಠಾತ್ತನೆ ಅಂಗಡಿಗೆ ಹೋಗಿ ಲೆಕ್ಕವನ್ನು ಪರಿಶೀಲಿಸುತ್ತೇವೆಂದು ಅಲ್ಲಿರುವ ಕ್ಯಾಷನ್ನು ತನಿಖೆಮಾಡುತ್ತಾರೆ. ಯಾರಿಗೋ ಕೈತಪ್ಪಿ ಅಡ್ವಾನ್ಸ್ ಕೊಟ್ಟಿರುವುದು ಬಿಟ್ಟುಹೋಗಿದ್ದರೆ ಅದನ್ನು ಚೆಕ್‌ಮಾಡಿ, ಸ್ವಲ್ಪ ಹೆಚ್ಚು ಕಡಮೆಯಿದ್ದರೂ ಅಲ್ಲಿರುವ ಹಣ ಅವೊತ್ತಿನ ವ್ಯಾಪಾರದ್ದಲ್ಲ, ಹತ್ತು ನಿಮಿಷದಲ್ಲಿ 3—4 ವರ್ಷದ ಲೆಕ್ಕ ಕೊಡಬೇಕೆಂದು ಹೇಳಿ ನೋಟೀಸ್ ಕೊಟ್ಟುಬಿಡುತ್ತಾರೆ. ಎಷ್ಟೋ ಸಂದರ್ಭದಲ್ಲಿ 10 ಗಂಟೆಗೆ ನೋಟೀಸ್ ಮಾಡಿ 11 ಘಂಟೆಯ ಒಳಗೆ ಲೆಕ್ಕ ಕೊಡದೆ ಹೋದರೆ ಪ್ರಾಸಿಕ್ಯೂಟ್ ಮಾಡುತ್ತೇವೆಂದು ಹೆದರಿಸುವುದೂ ಉಂಟು. ಹೀಗೆ ಲೆಕ್ಕ ಕೊಡಬೇಕೆಂದರೆ ಹೇಗೆತಾನೆ ಸಾಧ್ಯ? ಅಷ್ಟು ತುರ್ತಿನಲ್ಲಿ closing balance ನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆಯೇ? ಅಲ್ಲದೆ ಅವರು ಬರುವುದಕ್ಕೂ ಚೆಕ್ ಮಾಡುವುದಕ್ಕೂ ಕಾಲದ ನಿಗದಿಯಿಲ್ಲ, ಯಾವುದಕ್ಕೂ ಕಾಲದ ನಿಯಮವಿಲ್ಲ. ಯಾವನೋ ಒಬ್ಬ ಹುಡುಗ ಕುಳಿತುಕೊಂಡಿದ್ದರೂ ಸರಿ ಹಠಾತ್ತನೆ ಬಂದು ಲೆಕ್ಕದ ಪುಸ್ತಕ ಕೊಡು ಎಂದು ಹೇಳಿ seize ಮಾಡಿಕೊಂಡು ಹೋಗಿ ಆಫೀಸಿನಲ್ಲಿಟ್ಟುಕೊಂಡುಬಿಡುತ್ತಾರೆ. ನಾವು ಆಫೀಸಿಗೆ ಹೋಗಿ ಕೇಳಿದರೆ, ಪುಸ್ತಕ ನಮ್ಮ ಕೈಲಿಲ್ಲ ಮೇಲಕ್ಕೆ ಹೋಗಿದೆಯೆಂದು ಹೇಳುತ್ತಾ ಅದು ಅಲ್ಲೇ ಗದ್ದಲು ಹಿಡಿಯುತ್ತಿದ್ದರೂ ನಮ್ಮ ಕೈಗೆ ವಾಪಸು ಕೊಡುವುದಿಲ್ಲ. ಹೀಗೆ ಪುಸ್ತಕವನ್ನು ತಮ್ಮಲ್ಲೇ ಮೂರು ನಾಲ್ಕು ತಿಂಗಳು ಇಟ್ಟುಕೊಂಡು ಕೊನೆಗೆ ಅವರೇ manipulate ಮಾಡಿಬಿಟ್ಟರೂ ಗೊತ್ತಾಗುವುದಿಲ್ಲ. ಶಿವಮೊಗ್ಗದಲ್ಲಿ ಇದೇ ರೀತಿ ನಡೆದು ಸೇಲ್ಸ್ ಟ್ಯಾಕ್ಸ್‌ನವರ ಈ ಹಾವಳಿ ನೋಡಿ ಒಬ್ಬರು ತಮ್ಮ ಅಂಗಡಿಯನ್ನು ತೊಂದರೆ ತಾಳಲಾರದೆ ಮುಚ್ಚಿಯೇ ಬಿಟ್ಟರು. ವಾಸ್ತವಾಂಶ ಇದು. ಇದರಲ್ಲಿ ತಾವು ಯಾವ ರೀತಿ ಲೆಕ್ಕಗಳನ್ನಿಡಬೇಕು, ಕ್ರಮ ಏನು ಎಂಬುದು ಯಾವುದನ್ನೂ ತೋರಿಸಿಕೊಟ್ಟಿಲ್ಲ. ನಿರ್ದಿಷ್ಟವಾಗಿ ಲೆಕ್ಕವನ್ನು ಹೇಗಿಡಬೇಕೆಂದು ಹೇಳಿ ಇಂಥ ಕಿರುಕುಳಗಳನ್ನು ತಪ್ಪಿಸಿದರೆ 50 ರೂಪಾಯಿಯಲ್ಲ 100 ರೂಪಾಯಿಗಳನ್ನಾದರೂ ತೆರಿಗೆ ಹೆಚ್ಚು ಕೊಡಲು ವರ್ತಕರು ಸಿದ್ಧರಿದ್ದಾರೆ. ಹಾಗಿಲ್ಲದೆ ಇದಕ್ಕಾಗಿ ಒಬ್ಬ ಗುಮಾಸ್ತರನ್ನಿಟ್ಟುಕೊಂಡು ಅವರಿಗಾಗಿ ಬೇರೆ 500 ರೂಪಾಯಿ—1000 ರೂಪಾಯಿ ಕೊಡುವುದು ಸಾಧ್ಯವಿಲ್ಲ. ನಮಗೆ ಬರತಕ್ಕ ಉತ್ಪತ್ತಿಯೇ ಈಗಿನ depression ಕಾಲದಲ್ಲಿ ಕಡಮೆಯಾಗಿರುವಾಗ

(ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ)

ಹಿಂದಿನ ನಾಲ್ಕು ವರ್ಷದ ಲೆಕ್ಕ ಕೊಡಿ ಅದರಂತೆ ಚಾರ್ಜ್‌ಮಾಡುತ್ತೇವೆಂದರೆ ಹೇಗೆ? ಹಿಂದಿನ ವರ್ತಕರು ಯಾವುದೋ ರೂಪದಲ್ಲಿ—ಲೆಕ್ಕ ಇಟ್ಟಿದ್ದರು. ಆಗಿನ ಕಾಲ ಚೆನ್ನಾಗಿತ್ತು—ಅವರು ಹೆಚ್ಚಿನ ವ್ಯಾಪಾರ ಮಾಡಿರಬಹುದು. ಇವತ್ತು ವ್ಯಾಪಾರವೇ ಕಡಮೆಯಾಗಿದೆ. ಆದ್ದರಿಂದ ಹಿಂದಿನ ಲೆಕ್ಕ ಕೊಟ್ಟರೆ ಅದರಂತೆ ತೆರಿಗೆ ಕೊಡುವುದು ಹೇಗೆ? ಅಲ್ಲದೆ ಹಿಂದಿನ ಲೆಕ್ಕ ಕೊಟ್ಟು ಅದರಲ್ಲಿ ಹೆಚ್ಚಿಗೆ ವ್ಯಾಪಾರವಿದೆಯೆಂದು ತೋರಿ ಬಂದರೆ, ಇವೊತ್ತಿನ ವ್ಯಾಪಾರದ ಲೆಕ್ಕ ಸುಳ್ಳು ಎಂದು ಹೇಳಿ ಅದಕ್ಕೂ ಕೇಸು ಹಾಕುತ್ತೇವೆಂದು ಹೆದರಿಸುತ್ತಾರೆ. ಒಟ್ಟಿನಲ್ಲಿ ಅವರ ವರ್ತನೆ ನೋಡಿದರೆ ಇಷ್ಟು ಕಂಡುಬರತ್ತದೆ: ಕಾರಣಾಂತರದಿಂದ ಸರ್ಕಾರಕ್ಕೆ ಬರತಕ್ಕ ಆದಾಯವನ್ನು ಹೆಚ್ಚುಮಾಡಬೇಕೆಂಬುದು ಅವರ ಉದ್ದೇಶವಲ್ಲ. ತಮ್ಮ ಜೇಬು ತುಂಬಲು ಏನಾದರೂ ಮಾಡಬೇಕೆಂದಿರುವ ಹಾಗೆ ಕಾಣುತ್ತದೆ. ಅವರಲ್ಲಿ ಕೆಲವರು ಈಗಾಗಲೇ ಏನು ಆಸ್ತಿಪಾಸ್ತಿಗಳನ್ನುಮಾಡಿದ್ದಾರೆ, ಅವರು ಹೇಗೆ ವರ್ತನೆಮಾಡುತ್ತಿದ್ದಾರೆ ಎಂಬುದನ್ನು ನೋಡಿದರೆ ಗೊತ್ತಾಗುತ್ತದೆ. ಅಧಿಕಾರಿಗಳ ಈ ಮನೋಭಾವನೆಯನ್ನು ಪರಿವರ್ತನೆ ಮಾಡಿದ ಹೊರತು ಈ ತೆರಿಗೆ ಸಲೀಸಾಗಿ ಸರ್ಕಾರಕ್ಕೆ ಬರವಹಾಗೆ ಕಂಡುಬರುವುದಿಲ್ಲ.

ಇನ್ನೊಂದು ಕಷ್ಟವೇನೆಂದರೆ, ಮುಂಗಡವಾಗಿ ತೆರಿಗೆ ಕೊಡಬೇಕೆಂದು ಹೇಳುತ್ತಾರೆ. ಆ ವರ್ಷದ ವ್ಯಾಪಾರವೇ ಮುಗಿದಿರುವುದಿಲ್ಲದಿರುವಾಗ ಮುಂದಿನ ಆರುತಿಂಗಳಿಗೆ ಇವೊತ್ತೇ ಹಣ ಕೊಡಿಯೆಂದು ಹೇಳಿದರೆ ಮುಂದಿನ ಲಾಭ ನಷ್ಟಗಳಿಗೆ ಯಾರು ಗುರಿ? ಅಲ್ಲದೆ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರುಗಳಲ್ಲಿ, ತಾಲ್ಲೂಕು ಹೆಡ್‌ಕ್ವಾರ್ಟರುಗಳಲ್ಲಿರುವ ಸಣ್ಣ ಪುಟ್ಟ ವರ್ತಕರಿಗೆ ಹೋಗಿ ಈ ರೀತಿ ನೋಟೀಸು ಕೊಟ್ಟರೆ ಅವರು ಅಪೀಲುಮಾಡಬೇಕೆಂದರೂ ಇಷ್ಟು ದೂರ ಬೆಂಗಳೂರಿಗೇ ಬರಬೇಕಾಗುತ್ತದೆ. ಆದ್ದರಿಂದ ಅಪೀಲಿಗೆ ವ್ಯವಸ್ಥೆ ಹತ್ತಿರದಲ್ಲೇ ಆಯಾ ಜಿಲ್ಲಾ ಹೆಡ್‌ಕ್ವಾರ್ಟರುಗಳಲ್ಲೇ ಇಡಬೇಕೇ ವಿನಾ ಸಣ್ಣಪುಟ್ಟ ವರ್ತಕರು ಪ್ರತಿಯೊಬ್ಬರೂ ಬೆಂಗಳೂರಿಗೇ ಬಂದು ಇಲ್ಲೊಬ್ಬ ಲಾಯರನ್ನಿಟ್ಟುಕೊಂಡು ತಮ್ಮ ಕಾಷ್ಟವ್ಯಸನಗಳ ಜೊತೆಗೆ ಲಾಯರುಗಳ ಫೀಸುಗಳನ್ನು ಕೊಡುವುದೆಂದರೆ ಎಷ್ಟು ಕಷ್ಟವೆಂಬುದನ್ನು ನೀವೇ ನೋಡಿ. ಇವೆಲ್ಲಾ ನೋಡಿಕೊಂಡು ಆತನು ಲಂಚಕೊಟ್ಟು ಸರಿಮಾಡಿಕೊಳ್ಳುವುದೇ ಒಳ್ಳೆಯದೆಂದೆನಿಸುತ್ತದೆ. ಆದ್ದರಿಂದ ದಯವಿಟ್ಟು ಆಯಾ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರುಗಳಲ್ಲೇ ಅಪೀಲಿಗೆ ಅವಕಾಶವಿರಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಅನಂತರಾಮ್ (ಚಾಮರಾಜಪೇಟೆ).—ನನ್ನ ಹಿಂದೆ ಮಾತನಾಡಿದ ಸ್ನೇಹಿತರೆಲ್ಲರೂ ಮಾರಾಟ ತೆರಿಗೆಯು ಎಷ್ಟು ಕಷ್ಟ ಕೊಡುತ್ತಿದೆ ಎಂಬ ವಿಚಾರವನ್ನು ಹೇಳಿದ್ದಾರೆ. ನಾನು ತಿಳಿದಿರುವಂತೆ ಈ ಆಕ್ಟಿನಲ್ಲೇ ಒಂದು ನ್ಯೂನತೆಯಿದೆ. ಮಾರಾಟದ ತೆರಿಗೆ ಕೊಡದೆ ಹೋದರೆ ಆತನಿಗೆ ಕೋರ್ಟ್ ಮೂಲಕ ಸಮನ್ಸ್ ಕಳುಹಿಸಿ, ಅಲ್ಲಿ ವಿಧಿಸಿದ ದಂಡವನ್ನು ಕೊಡದೆಹೋದರೆ ಜೈಲಿಗೆ ಕಳುಹಿಸುವ ಶಿಕ್ಷೆ ಕೊಡುತ್ತಾರೆ. ಇದೊಂದು ದೊಡ್ಡ ನ್ಯೂನತೆಯೆನ್ನಬಹುದು. ಯಾವನಾದರೂ ಒಬ್ಬ ರೈತ ಭೂಕಂದಾಯವನ್ನು ಕೊಡದೆಹೋದರೆ ಆತನ ಭೂಮಿಯನ್ನು ಹರಾಜು ಮಾಡುತ್ತಾರೆ ಅಥವಾ ಆತನ ಇತರ ಚರಸ್ವತ್ತುಗಳನ್ನು ಮಾರಿ ವಸೂಲುಮಾಡಿಕೊಳ್ಳುತ್ತಾರೆ. ಹೀಗೆ ಮಾಡುವುದು ನ್ಯಾಯವೇ ಹೊರತು ಆತನನ್ನು ಏಕದಂ ಜೈಲಿಗೆ ಕಳುಹಿಸುವುದು ಸರಿಯಲ್ಲ. ಎಷ್ಟೋ ಸಂದರ್ಭಗಳಲ್ಲಿ ಈ ರೀತಿ ಕೇಸು ಹಾಕಿ ಜೈಲಿಗೆ ಕಳುಹಿಸಿರುವ ನಿದರ್ಶನಗಳಿವೆ. ಆದ್ದರಿಂದ ಈ ನ್ಯೂನತೆಯನ್ನು ಸರ್ಕಾರದವರು ತಕ್ಷಣ ಯೋಚನೆಮಾಡಿ ಸೂಕ್ತ ತಿದ್ದುಪಡಿಮಾಡಬೇಕೆಂದು ನನ್ನ ಸಲಹೆ.

ಶ್ರೀ ಮುಲ್ಕ ಗೋವಿಂದರೆಡ್ಡಿ (ಚಿತ್ರದುರ್ಗ).—ಅಧ್ಯಕ್ಷರೇ, ಈ ಖೋತಾ ಸೂಚನೆಯನ್ನು ಸಮರ್ಥಿಸುತ್ತಾ ಒಂದೆರಡು ವಿಷಯಗಳನ್ನು ಹೇಳಬಯಸುತ್ತೇನೆ. ಚಿಕ್ಕ ಚಿಕ್ಕ ವರ್ತಕರಿಗೇ ಮುಖ್ಯವಾಗಿ ಅನೇಕ ವಿಧಗಳಲ್ಲಿ ಈ ಸೇಲ್ಸ್‌ಟ್ಯಾಕ್ಸ್‌ನಿಂದ ತೊಂದರೆಗಳುಂಟಾಗುತ್ತಿವೆ. ದೊಡ್ಡ ದೊಡ್ಡವರಿಗೆ ತೊಂದರೆ ಯಾದರೇನೋ ಪರವಾಗಿಲ್ಲ. ಅದಿಲ್ಲದೆ ಚಿಕ್ಕ ಚಿಕ್ಕವರಿಗೇ ಬಹಳ ಕಿರುಕುಳಗಳುಂಟಾಗುತ್ತವೆ. ಅಂಥ ಕಿರುಕುಳಗಳು ಎಷ್ಟೆಂಬುದನ್ನು ಈ ಹಿಂದೆ ಮಾತನಾಡಿರುವವರಾಗಲೇ ಹೇಳಿದ್ದಾರೆ. ಇದರ ಜೊತೆಗೆ ಸ್ವಲ್ಪ ದಿವಸಗಳ ಹಿಂದೆ ಮಾನ್ಯ ಮುಖ್ಯಮಂತ್ರಿಗಳವರು, ಸೇಲ್ಸ್‌ಟ್ಯಾಕ್ಸಿನಿಂದ ಸರಿಯಾದ ರೀತಿಯಲ್ಲಿ ಸರಿಯಾಗಿ ಆದಾಯ ಬರುತ್ತಿಲ್ಲ, ಸರಿಯಾಗಿ Collections ಆಗುತ್ತಿಲ್ಲವೆಂದು ಒಂದಾನೊಂದು ಸ್ಥಳದಲ್ಲಿ ಭಾಷಣಮಾಡಿದ್ದನ್ನು Quote ಮಾಡಿ ಸೇಲ್ಸ್‌ಟ್ಯಾಕ್ಸ್ ಆಫೀಸರುಗಳಿಗೆಲ್ಲಾ ಒಂದು ಸರ್ಕ್ಯುಲರ್ ಬೇರೆ ಕಳುಹಿಸಿದ್ದಾರೆ. ಈಗಾಗಲೇ ಅನೇಕ ಚಿಕ್ಕಚಿಕ್ಕ ವರ್ತಕರಿಗೆ ಸೇಲ್ಸ್‌ಟಾಕ್ಸ್ ಆಫೀಸರುಗಳು ಎಷ್ಟೋ ತೊಂದರೆ ಕೊಟ್ಟಿದ್ದಾರೆ, ತೊಂದರೆ ಕೊಡುತ್ತಲೂ ಇದ್ದಾರೆ. ಕೋರ್ಟ್‌ನಲ್ಲಿ ಶಿಕ್ಷೆಯಾಗಿ ಜೈಲುವಾಸ ಅನುಭವಿಸುವುದು ಕೂಡ ಆಗುತ್ತಿದೆ. ಇವೆಲ್ಲಾ ಆಗುತ್ತಿರುವಾಗ ಈ ರೀತಿ ಸರ್ಕ್ಯುಲರ್ ಬಂದು ಅವರುಗಳು ಹೆಚ್ಚಿನ Collections ತೋರಿಸಬೇಕು ಇಲ್ಲದಿದ್ದರೆ ಅವರುಗಳ ಮೇಲೆ ಕ್ರಮತೆಗೆದುಕೊಳ್ಳಬೇಕಾಗುತ್ತದೆ ಎಂದು ಆ ಸೇಲ್ಸ್ ಟ್ಯಾಕ್ಸ್ ಆಫೀಸರುಗಳಿಗೆ ತಿಳಿಸಿದರೆ, ಅವರಿಗೆ ಇನ್ನೂ ಹೆಚ್ಚಿಗೆ ಕಿರುಕುಳಕೊಡಿ ಎಂದು ಸರ್ಕಾರದವರು ತಿಳಿಸಿದರೆ ಏನಾಗಬೇಕು!!

ಶ್ರೀ ಕೆ. ಹನುಮಂತಯ್ಯ (ಮುಖ್ಯಮಂತ್ರಿಗಳು).—ಹಾಗೆ ಕಿರುಕುಳಕೊಡಿ ಎಂದು ನಾವು ಬರೆದಿಲ್ಲ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಅಂತೂ ಈ ರೀತಿಯಾಗಿ ಮಾಡಿರುವುದರಿಂದ ಬಹಳ ತೊಂದರೆಗಳಾಗುವುದಕ್ಕೆ ಅವಕಾಶವಾಗಿದೆ. ಇದೆಲ್ಲಾ ಮುಖ್ಯವಾಗಿ ಒಂದು ನೀತಿಗೆ ಸಂಬಂಧಪಟ್ಟ ವಿಷಯವಾಗಿದೆ. ಸಿಂಗಲ್ ಪಾಯಿಂಟ್ ಟ್ಯಾಕ್ಸ್ ಹಾಕಿದ್ದರೆ ಈ ಯಾವ ಕಿರುಕುಳಗಳೂ ವರ್ತಕರಿಗೆ ಉಂಟಾಗುತ್ತಿರಲಿಲ್ಲ. ಮಲ್ಟಿ ಪಾಯಿಂಟ್ ನಿಂದಲೇ ಇಷ್ಟೆಲ್ಲಾ ತೊಂದರೆಗೆ ಕಾರಣವಾಗಿರುವುದು. ಆದ್ದರಿಂದ ನಾನು ಈ ಖೋತಾ ಸೂಚನೆಯನ್ನು ಹೃತ್ಪೂರ್ವಕವಾಗಿ ಸಮರ್ಥಿಸುತ್ತೇನೆ.

ಶ್ರೀ ಪಿ. ಆರ್. ರಾಮಯ್ಯ (ಬಸವನಗುಡಿ).—ಅಧ್ಯಕ್ಷರೇ, ಬೆಂಗಳೂರು ನಗರದಂಥ ದೊಡ್ಡ ನಗರದಲ್ಲಿ, ಬಹು ಜನ ಚಿಲ್ಲರೆ ವರ್ತಕರಿರತಕ್ಕ ಈ ನಗರದಲ್ಲಿ ಈ ಸೇಲ್ಸ್‌ಟ್ಯಾಕ್ಸ್ ಇಲಾಖೆಯಿಂದ ಅಗತ್ಯ ಅನಾನುಕೂಲಗಳೂ ಕಿರುಕುಳಗಳೂ ಬಹಳವಾಗಿವೆಯೆಂದು ನನ್ನ ಹತ್ತಿರ ಅನೇಕ ವರ್ತಕರೇ ಬಂದು ಹೇಳಿದ್ದಾರೆ. ಆದ್ದರಿಂದ ನಾವಿದನ್ನು ಸ್ವಲ್ಪಮಟ್ಟಿಗೆ ಶಾಸ್ತ್ರೀಯವಾಗಿ ಆಲೋಚನೆ ಮಾಡಬೇಕು. 1948ನೆಯ ಇಸವಿಯಲ್ಲಿ ಸೇಲ್ಸ್‌ಟ್ಯಾಕ್ಸ್ ಎನ್ನುವುದು ಮೊಟ್ಟಮೊದಲು ನಮ್ಮ ಸಂಸ್ಥಾನದಲ್ಲಿ ಜಾರಿಗೆ ಬಂತು. ಆದರೆ ಲೆಕ್ಕಗಳನ್ನು ಬರೆಯುವ ವಿಧಾನದಲ್ಲಾಗಲಿ, ಯಾವ ರೀತಿ ಲೆಕ್ಕಗಳನ್ನು ತನಿಖೆಮಾಡಬೇಕೆಂಬುದರಲ್ಲಾಗಲಿ ಸರ್ಕಾರದವರಿಗೂ ವರ್ತಕರಿಗೂ ಯಾವರೀತಿಯಾದ ಒಂದು ಗೊತ್ತುವಳಿ ನಿರ್ಣಯವಾಗಿಲ್ಲ. ವರ್ತಕರು

ಬರೆಯತಕ್ಕ ಲೆಕ್ಕಗಳನ್ನು ಈ ನೌಕರರು ಒಪ್ಪದೆ ತಮ್ಮದೇ ಒಂದು ರೀತಿಯ ಅಜಮಾಯಿಷಿಯ ಮೇಲೆ ಕಂದಾಯ ಹಾಕುತ್ತಾರೆ. ಅದಲ್ಲದೆ ಕಲವು ಸಂದರ್ಭಗಳಲ್ಲಿ ಕೆಲವು ಆಶೋತ್ತರಗಳಿಗಾಗಿ, ತಾವು ಯಾವತೆರಿಗೆ ನಿಗದಿಮಾಡಿರುತ್ತಾರೋ ಆ ತೆರಿಗೆಯನ್ನು ತಾವೇ ತಮ್ಮ ಆಶೋತ್ತರಗಳು ತೀರಿದ ಮೇಲೆ ಬದಲಾಯಿಸಿರುವ ಸಂದರ್ಭಗಳು ನೂರಕ್ಕೆ ಎಪ್ಪತ್ತೈದರಷ್ಟಿವೆಯೆಂದು ನನ್ನ ಗಮನಕ್ಕೆ ಬಂದಿದೆ. ಆದ್ದರಿಂದ ಈ ವಿಷಯದಲ್ಲಿ ಸರ್ಕಾರದವರು ಒಂದು ನಿರ್ಧಾರವಾದ ನೀತಿಯನ್ನನುಸರಿಸಿ ಯಾವ ರೀತಿ ಸೇಲ್ಸ್‌ಟ್ಯಾಕ್ಸ್ ಹಾಕಬೇಕು, ಯಾವರೀತಿ ಚೆಕ್‌ಮಾಡಬೇಕು ಎಂಬ ಬಗ್ಗೆ ಸರಿಯಾದ ತಿಳಿವಳಿಕೆಯನ್ನು ನೌಕರರಿಗೆ ಮತ್ತು ವರ್ತಕರಿಗೆ ಕೊಡದೆ ಹೋದರೆ ಈ ಅಸಮಾಧಾನಗಳು ಇನ್ನೂ ಜಾಸ್ತಿಯಾಗುತ್ತವೆ ಮತ್ತು ಸರ್ಕಾರದವರಿಗೆ ನ್ಯಾಯವಾಗಿ ಕೊಡಬೇಕಾದ ದುಡ್ಡಿನ ವಿಷಯದಲ್ಲೂ ಅಸಮಾಧಾನಕ್ಕೆ ಕಾರಣವಾಗುತ್ತದೆ. ಆದ್ದರಿಂದ ಈ ನಾಲ್ಕು ವರ್ಷಗಳಿಂದ ಬಂದಿರತಕ್ಕ ದೂರುಗಳನ್ನು ಪರಿಶೀಲನೆಮಾಡಿ ಅದನ್ನು ಯಾವರೀತಿ ಪರಿಹಾರ ಮಾಡಬೇಕೆಂಬುದನ್ನು ಶಾಸ್ತ್ರೀಯ ದೃಷ್ಟಿಯಿಂದ ಆಲೋಚನೆಮಾಡಿ, ಇತರ ಪ್ರಾಂತಗಳ ಯಾವ ರೀತಿ ಏರ್ಪಾಡು ಮಾಡಿದ್ದಾರೆಂಬುದನ್ನೂ ಗಣನೆಗೆ ತೆಗೆದುಕೊಂಡು ಸೂಕ್ತ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪ (ರೆವೆನ್ಯೂ ಮತ್ತು ಮರಾಮತ್ ಶಾಖೆಗಳ ಮಂತ್ರಿಗಳು).—ಅಧ್ಯಕ್ಷರೇ, ಮಾರಾಟದತೆರಿಗೆ ನಮ್ಮ ಸಂಸ್ಥಾನಕ್ಕೆ ಹೊಸದಲ್ಲ. 1948ನೆಯ ಇಸವಿಯಿಂದ ಈ ತೆರಿಗೆ ನಮ್ಮಲ್ಲಿ ಜಾರಿಯಲ್ಲಿದೆ. ಈ ತೆರಿಗೆಯನ್ನು ವಸೂಲುಮಾಡುವಾಗ ವರ್ತಕರಿಗೆ ತೊಂದರೆ ಕೊಡಬಾರದೆಂಬುದೇ ಸರ್ಕಾರದವರ ಉದ್ದೇಶ. ಕಳೆದ ಮೇ ತಿಂಗಳಲ್ಲಿ ನಾನು ಈ ಇಲಾಖೆಯ ಆಡಳಿತವನ್ನು ವಹಿಸಿಕೊಂಡ ನಂತರ ಈ ಇಲಾಖೆಯ ಅಧಿಕಾರಿಗಳ ಒಂದು ಸಮ್ಮೇಳನವನ್ನು ನಡೆಸಿ ಅವರಿಗೆ ಸ್ಪಷ್ಟವಾಗಿ ಸರ್ಕಾರದ ನೀತಿಯೇನೆಂಬುದನ್ನು ತಿಳಿಸಿದ್ದೇನೆ. ಸೇಲ್ಸ್‌ಟ್ಯಾಕ್ಸ್ ವಸೂಲು ಮಾಡುವುದರಲ್ಲಿ ವರ್ತಕರಿಗೆ ಯಾವರೀತಿಯಲ್ಲೂ ತೊಂದರೆ ಕೊಡಕೂಡದು, ಅವರನ್ನು ಅಗೌರವವಾಗಿ ಕಾಣಕೂಡದು ಎಂದು ಕಟ್ಟುನಿಟ್ಟಾಗಿ ಹೇಳಿದ್ದೇನೆ. ಇಷ್ಟಾದರೂ ಅಲ್ಲಲ್ಲಿ ಒಬ್ಬಿಬ್ಬರು ವರ್ತಕರನ್ನು ಅಗೌರವವಾಗಿ ಕಾಣುತ್ತಿರಬಹುದು, ಅವರಿಗೆ ತೊಂದರೆಕೊಡುತ್ತಿರಬಹುದು. ಆದರೆ ನನ್ನ ಗಮನಕ್ಕೆ ಅಂಥ ನಿದರ್ಶನಗಳನ್ನು ಯಾರೂ ತಂದಿಲ್ಲ. ತಂದರೆ ಅವರ ಮೇಲೆ ಸೂಕ್ತ ಕಾರ್ಯಕ್ರಮವನ್ನು ಕೈಕೊಳ್ಳುತ್ತೇವೆ. ಸರ್ಕಾರಿ ಅಧಿಕಾರಿಗಳು ಸಾರ್ವಜನಿಕರ ನೌಕರರು; ನಿಜ. ಆದರೆ ಅವರು ತಮ್ಮ ಕರ್ತವ್ಯ ನಿರ್ವಹಣೆಯ ಕಾಲದಲ್ಲಿ ಉದ್ದೇಶಪೂರ್ವಕವಾಗಿ ಅಲ್ಲದೆ ಕೆಲವರ ಮನಸ್ಸನ್ನು ನೋಯಿಸಿರಬಹುದು. ಅಂಥ ಸಂದರ್ಭದಲ್ಲಿ ನಾವೇನನ್ನೂ ಮಾಡುವುದಕ್ಕಾಗುವುದಿಲ್ಲ. ಹಾಗಿಲ್ಲದೆ ಉದ್ದೇಶಪೂರ್ವಕವಾಗಿಯೇ ಯಾರನ್ನಾದರೂ ಅಗೌರವವಾಗಿ ಕಂಡು ಕಿರುಕುಳಗಳಿಗೆ ಗುರಿಪಡಿಸಿದ್ದರೆ ಅಂಥವರ ವಿಚಾರದಲ್ಲಿ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುವುದು ಸರ್ಕಾರದವರ ಕರ್ತವ್ಯ.

ಶ್ರೀಮಾನ್ ನಾಗಪ್ಪಶೆಟ್ಟರು ಕೆಲವು ಅಧಿಕಾರಿಗಳಿಗೆ ಜೇಬು ತುಂಬುವ ಆಸೆಯುದೆಯೆಂದು ಹೇಳಿದರು ಆದರೆ ವರ್ತಕರಲ್ಲೂ ಕೆಲವರಿಗೆ ಸರ್ಕಾರದವರಿಗೆ ಸಲ್ಲತಕ್ಕ ಹಣಕ್ಕೆ ಧೋಕಾ ಕೊಡತಕ್ಕ ಆಸೆಯೂ ಇದೆಯೆಂದು ಹೇಳಬೇಕಾಗಿದೆ. ನಮ್ಮ ದೇಶದಲ್ಲಿ ಕೆಲವರು ಚಾಪೇಕೆಳಗೆ ತೂರುವವರಿದ್ದರೆ ಇನ್ನು ಕೆಲವರು ರಂಗೋಲಿಕೆಳಗೆ ನುಗ್ಗುವವರೂ ಇದ್ದಾರೆ! ನಾನು ಲಾಯರಾಗಿರಬೇಕಾದರೆ ಎರಡು ತೆರದ ಲೆಕ್ಕಗಳನ್ನು ಬರೆದಿಟ್ಟು ಸುಳ್ಳುಲೆಕ್ಕವನ್ನು ನನ್ನ ಕೈಗೆಕೊಟ್ಟು ಕೊನೆಗೆ ಅಧಿಕಾರಿಗಳು ಬಂದು ನಿಜವಾದ ಲೆಕ್ಕದ ಪುಸ್ತಕವನ್ನು ತಂದು ತೋರಿಸಿದಾಗ ಹೇಗಾದರೂಮಾಡಿ ಉಳಿಸಿ ಎಂದು ಕೇಳಿಕೊಂಡ ಸಂದರ್ಭಗಳಿವೆ.

Sri S. SRINIVASA IYENGAR (T.-Narsipur).—Professional Secrecy! Professional secrecy!

ಶ್ರೀ ಕಡಿದಾಳ್ ಮಂಜಪ್ಪ.—ವರ್ತಕರಲ್ಲೂ ಅಪ್ರಾಮಾಣಿಕರಿದ್ದಾರೆಂಬುದನ್ನು ಮಾನ್ಯ ಸದಸ್ಯರ ಗಮನಕ್ಕೆ ತಂದೆ; ಅಷ್ಟು. ವರ್ತಕರೆಲ್ಲರೂ ಆ ರೀತಿ ಇದ್ದಾರೆಂದೂ ಹೇಳುವುದಿಲ್ಲ; ನಮ್ಮ ಅಧಿಕಾರಿಗಳೆಲ್ಲರೂ ಕೂಡ ಸದ್ಗುಣಸಂಪನ್ನರೆಂದೂ ನಾನು ಹೇಳುವುದಕ್ಕೆ ಹೋಗುವುದಿಲ್ಲ.

ಇನ್ನು ಮಾನ್ಯಸದಸ್ಯರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಲೆಕ್ಕಗಳನ್ನು ಇಂಗ್ಲೀಷಿನಲ್ಲ ಅಥವಾ ಕನ್ನಡದಲ್ಲಿಡಬೇಕಾಗಿದೆಯೆಂದು ನಿಬಂಧನೆಯಲ್ಲಿ ವಿಧಾಯಕವಾಗಿದೆ. ಅದಕ್ಕೆ ಬದಲು ಯಾವ ಭಾಷೆಯಲ್ಲಾದರೂ ಇಡುವುದಕ್ಕೆ ಅವಕಾಶಕೊಡಬೇಕೆಂದು ಹೇಳಿದರು. ನಮ್ಮ ದೇಶ ಕನ್ನಡದೇಶ. ನಮ್ಮ ಭಾಷೆ ಕನ್ನಡ ಭಾಷೆ. ಕನ್ನಡಕ್ಕಾಗಿ ಪ್ರೋತ್ಸಾಹ ಕೊಡಬೇಕೆಂದು ಹೇಳಿ ಕನ್ನಡ ಮಾಡಿಯಮ್ಮೇ ಇರಬೇಕೆಂದು ಅನೇಕರು ವಾದಿಸುತ್ತಿದ್ದಾರೆ. ಅಂಥ ಸಂದರ್ಭದಲ್ಲಿ ತಮಿಳು, ಗುಜರಾತಿ, ಮಲೆಯಾಳಿ ಮುಂತಾದ ಎಲ್ಲಾ ಭಾಷೆಗಳಲ್ಲೂ ಇಡುವುದಕ್ಕೆ ಅವಕಾಶ ಕೊಡಬೇಕೆಂದು ಹೇಳುವುದರ ಔಚಿತ್ಯ ನನಗರ್ಥವಾಗುವುದಿಲ್ಲ. ಗುಜರಾತಿನಿಂದ ಬೊಂಬಾಯಿನಿಂದ ಮತ್ತು ಬೇರೆ ಬೇರೆ ಪ್ರಾಂತಗಳಿಂದ ಭಾರಿ ಭಾರಿ ಬಂಡವಾಳ ತಂದು ಬೇಕಾದಷ್ಟು ಇಲ್ಲಿ ಸಂಪಾದನೆ ಮಾಡಿಕೊಳ್ಳುತ್ತಾರೆ. ಕನ್ನಡ ಗುಮಾಸ್ತರೊಬ್ಬರನ್ನಿಟ್ಟುಕೊಂಡು ಕನ್ನಡದಲ್ಲಿ ಲೆಕ್ಕವನ್ನಿಡುವುದಕ್ಕೆ ಅವರಿಗೆ ತೊಂದರೆಯೇನೋ ಗೊತ್ತಾಗುವುದಿಲ್ಲ! ಬಾಕಿ ಮಾತು ವ್ಯವಹಾರವೆಲ್ಲವನ್ನೂ ಅವರಿಗೆ ಕನ್ನಡದಲ್ಲಿ ನಡೆಸುವುದಕ್ಕಾಗುತ್ತದೆ, ಲೆಕ್ಕವನ್ನು ಮಾತ್ರ ಕನ್ನಡದಲ್ಲಿಡುವುದಕ್ಕಾಗುವುದಿಲ್ಲ ಎಂದು ಹೇಳಿದರೆ ನನಗೆ ಅರ್ಥವಾಗುವುದಿಲ್ಲ. ಅದೂ ಅಲ್ಲದೆ ಲೆಕ್ಕಗಳನ್ನು ಯಾವ ಭಾಷೆಯಲ್ಲಾದರೂ ಇಡಬಹುದೆಂದು ರೂಲ್ಸ್ ಮಾಡಿದರೆ, ಅಲ್ಲಿಗೆ ನಮ್ಮ ಸಿಬ್ಬಂದಿಯವರು ಹೇಗಿರಬೇಕೆಂಬುದನ್ನೂ ನೀವು ಆಲೋಚನೆ ಮಾಡಬೇಕು. ತಮಿಳು ಗೊತ್ತಿರುವವರಿರಬೇಕು. ತೆಲುಗು ಗೊತ್ತಿರುವವರಿರಬೇಕು, ಗುಜರಾತಿ, ಮಾರ್‍ವಾರೀ ತಿಳಿದಿರುವವರೂ ಇರಬೇಕು!! ಆದ್ದರಿಂದ ಇದು ಸೂಕ್ತವಾದ ಸಲಹೆಯಲ್ಲವೆಂದು ನನ್ನ ಮನವಿ.

Sri. M. PALANIYAPPAN.—How could people coming from outside places be expected to know the Kannada language?

Sri Kadidal MANJAPPA.—If they care to invest money and carry on trade here, they must necessarily invest money on clerks who know the Kannada language.

ಆ ಮೇಲೆ ಲೆಕ್ಕಗಳನ್ನು ಒಂದೊಂದು ಕಸೆಯಲ್ಲಿ ಒಂದೊಂದು ರೀತಿಯಲ್ಲಿಡಬೇಕೆಂದು ಹೇಳುತ್ತಾರೆಂದು ಒಂದು ಆಕ್ಷೇಪಣೆ ಬಂತು ಅದಕ್ಕೆ ಅವಕಾಶವಿಲ್ಲ. ಲೆಕ್ಕಗಳನ್ನು ಈ ರೀತಿಯಾಗಿಯೇ ಇಡಬೇಕೆಂದು ರೂಲ್ಸ್‌ನಲ್ಲಿ ವಿಧಾಯಕವಾಗಿದೆ.

(ಶ್ರೀ ಕಡಿದಾಳ್ ಮಂಜಪ್ಪ)

ಕಮಿಷನ್ ಏಜೆಂಟರುಗಳ ವಿಚಾರದಲ್ಲಿ ಶ್ರೀಮಾನ್ ಬಿ. ಸಿ. ನಂಜುಂಡಯ್ಯನವರು ಅಕ್ಷೇಪಣೆ ಮಾಡಿದರು. ಕಮಿಷನ್ ಏಜೆಂಟರುಗಳು ಎಲ್ಲರೂ ಲೈಸೆನ್ಸ್ ತೆಗೆದುಕೊಳ್ಳಬೇಕೆಂದಿದೆ. ಲೈಸೆನ್ಸ್ ತೆಗೆದುಕೊಂಡು ನಂತರ ಲೈಸೆನ್ಸಿನ ಷರತ್ತುಗಳಿಗನುಸಾರವಾಗಿ ಅವರು ಲೆಕ್ಕಗಳನ್ನಿಡಬೇಕು. ಕೆಲವರು ಲೈಸೆನ್ಸ್ ಏನೋ ತೆಗೆದುಕೊಳ್ಳುತ್ತಾರೆ; ಆ ಮೇಲೆ ಲೆಕ್ಕಗಳನ್ನಿಡುವುದರಲ್ಲಿ ಸ್ವಲ್ಪ ಕೈಚಳಕ ನಡೆಸುತ್ತಾರೆ.

ಸದಸ್ಯರೊಬ್ಬರು.—ಹಿಂದೆ ಬಂದಿದ್ದ ಅಧಿಕಾರಿಗಳು ಲೆಕ್ಕ ಸರಿಯಾಗಿದೆಯೆಂದು ಹೇಳಿರುತ್ತಾರೆ. ಹೊಸದಾಗಿ ಬಂದ ಆಫೀಸರು ಅದನ್ನೇ ತಪ್ಪು ಎಂದು ಹೇಳುತ್ತಾರಲ್ಲಾ! ಹೇಗೆ?

ಶ್ರೀ ಕಡಿದಾಳ್ ಮಂಜಪ್ಪ.—ಆದ್ದರಿಂದ ಕಮಿಷನ್ ಏಜೆಂಟರು ಲೈಸೆನ್ಸಿನ ಷರತ್ತಿಗನುಸಾರವಾಗಿ ಮಾಡಿದರೆ ಯಾರದೂ ತೊಂದರೆಯಿರುವುದಿಲ್ಲ. ಅದನ್ನು ಸರಿಯಾಗಿ ಮಾಡದೆಯಿದ್ದರೆ ಮಾತ್ರ ಸೇಲ್ಸ್ ಟ್ಯಾಕ್ಸ್ ಅಧಿಕಾರಿಗಳು ಸೂಕ್ತ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀಮಾನ್ ಮೂಡಲಗಿರಿಗೌಡರು ಸೇಲ್ಸ್ ಟ್ಯಾಕ್ಸ್ ಅಧಿಕಾರಿಗಳ ಮತ್ತು ಅಸಿಸ್ಟೆಂಟ್ ಸೇಲ್ಸ್ ಟ್ಯಾಕ್ಸ್ ಅಧಿಕಾರಿಗಳ ಜೂರಿಸ್ಡಿಕ್ಷನ್ ಬೇರೆ ಬೇರೆಯಾಗಿರಬಾರದೆಂದು ಹೇಳಿದರು. ಅದನ್ನು ನಾನು ವಿಮರ್ಶೆ ಮಾಡುತ್ತೇನೆ.

ಆಮೇಲೆ ಈ ಅಧಿಕಾರಿಗಳು ಕೆಲವರು ಲಂಚಕೋರರಾಗಿದ್ದಾರೆಂಬ ಅಪಾದನೆಯನ್ನು ಈ ಮಾನ್ಯ ಸಭೆಯ ಗಮನಕ್ಕೆ ತಂದಿದ್ದಾರೆ. ಖಾಸಗಿಯಾಗಿ ಬಂದು ಶ್ರೀಮಾನ್ ನಾಗಪ್ಪಶೆಟ್ಟರು ನನಗೆ ಎರಡು ಮೂರು ನಿದರ್ಶನಗಳನ್ನು ತೋರಿಸಲಿ; ಅಂಥವರುಗಳನ್ನು ಖಂಡಿತವಾಗಿಯೂ ಹಿಂದು ಮುಂದೆ ನೋಡದೆ ಡಿಸ್ಮಿಸ್ ಮಾಡುತ್ತೇನೆ.

ಆಮೇಲೆ ಶ್ರೀಮಾನ್ ಅನಂತರಾಮನ್‌ರವರು ಸೇಲ್ಸ್ ಟ್ಯಾಕ್ಸ್ ಕಾನೂನಿನಲ್ಲಿ ತೆರಿಗೆ ಕೊಡದಿರುವವರನ್ನು ಪ್ರಾಸಿಕ್ಯೂಟ್ ಮಾಡಿ ಜೈಲು ಶಿಕ್ಷೆಗೊಳಪಡಿಸುವುದಕ್ಕೆ ಅವಕಾಶ ಮಾಡಿದೆ, ಇದನ್ನು ಬದಲಾಯಿಸಬೇಕೆಂದು ಸಲಹೆ ಮಾಡಿದ್ದಾರೆ. ಅದಕ್ಕೆ ನನ್ನ ಉತ್ತರ ಇಷ್ಟು. ನಮ್ಮ ಸಂಸ್ಥಾನಕ್ಕೆ ಪರದೇಶದಿಂದ, ಮದ್ರಾಸು, ಬೊಂಬಾಯಿ ಮತ್ತು ಇನ್ನೂ ದೂರದಿಂದ ವರ್ತಕರು ವ್ಯಾಪಾರಕ್ಕೆ ಬಂದಿರುತ್ತಾರೆ. ಇಂದು ಒಬ್ಬ ಬಂದು ರುಸ್ತುಂಜಿ ಎಂದು ಬೋರ್ಡ್ ಹಾಕಿಕೊಳ್ಳುತ್ತಾನೆ. ಒಂದು ವರ್ಷ ಬಿಟ್ಟುಕೊಂಡು ಹೋಗಿ ನೋಡಿದರೆ ಆ ಬೋರ್ಡ್ ಹೋಗಿ ರುಸ್ತುಂಜಿ ಅಂಡ್ ಕೋ ಎನ್ನುತ್ತಲೋ ಅಥವಾ ಇನ್ನೊಂದು ಫರ್ಮಿನಬೋರ್ಡೋ ಅಲ್ಲಿ ಹಾಕಿರುತ್ತದೆ. ಅಂಥವರಿಂದ ಬರಬೇಕಾದ ಹಣವನ್ನು ವಸೂಲುಮಾಡುವುದು ಹೇಗೆಂಬುದನ್ನು ಶ್ರೀಮಾನ್ ಅನಂತರಾಮನ್‌ರವರೇ ಹೇಳಲಿ!

ಶ್ರೀ ಬಿ. ಸಿ. ನಂಜುಂಡಯ್ಯ.—ಒಬ್ಬ ಚಿಲ್ಲರೆ ವರ್ತಕನಿರುತ್ತಾನೆ; ಅವನಿಂದಲೂ ದಿನಕ್ಕೆ ಎರಡು ರೂಪಾಯಿಗಳಂತೆ ಅಡ್ವಾನ್ಸ್ ಕೊಡಬೇಕೆನ್ನುವುದು, ಒಬ್ಬ ದೊಡ್ಡ ಹೋಟಲಿನವನೂ 50 ರೂಪಾಯಿ ಕೊಡಬೇಕೆನ್ನುವುದು ಯಾವ ನ್ಯಾಯ? ಆ ಚಿಲ್ಲರೆ ವರ್ತಕ ಹೇಗೆ ಕೊಡುತ್ತಾನೆ?

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲಿ ಅಧಿಕಾರಿಗಳು ಕಾನೂನಿನ ಹದ್ದುಮೀರಿ ಕಿರುಕುಳ ಕೊಡುವ ರೀತಿಯಲ್ಲಿ ವರ್ತಿಸುತ್ತಾರೋ ಅಂಥವರ ಮೇಲೆ ನಿಜವಾಗಿಯೂ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರದವರು ಸದಾ ಸಿದ್ಧವಾಗಿದ್ದಾರೆ. ಆದ್ದರಿಂದ ಅಂಥ ನಿದರ್ಶನಗಳನ್ನು ಸರ್ಕಾರದವರ ಗಮನಕ್ಕೆ ತರಬೇಕೆಂದು ಮಾನ್ಯ ಸದಸ್ಯರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

Sri B. C. NANJUNDAIYA.—I seek the leave of the House to withdraw my cut motion.

The cut motion was, by leave withdrawn.

Mr. SPEAKER.—The question is :

"That a supplementary sum not exceeding Rs. 19,200 be granted to the Government to defray the charges which will come in course of payment during the year ending 31st day of March 1953, in respect of 'Other Taxes and Duties'."

The motion was adopted.

2-30 P.M.

Demand No. 8.—Irrigation.

18. Other Revenue Expenditure financed from Ordinary Revenue.

Mr. SPEAKER.—Motion moved :—

"That a supplementary sum not exceeding Rs. 5,00,000 be granted to the Government to defray the charges which will come in course of payment during the year ending 31st day of March 1953, in respect of 'Other Revenue Expenditure financed from Ordinary Revenue'."

The first cut motion stands in the name of Sri M. Sankarlinge Gowda. This should have been tabled under Demand No. 37. Even under Demand No. 37, I may say, there is no reference to K. R. S. So the cut motion is not admissible at all.

Restoration of Tanks in Nanjangud Taluk by desilting.

ಶ್ರೀ ಎಂ. ಮಾದಯ್ಯ (ನಂಜನಗೂಡು—ಅನುಸೂಚಿತ ಜಾತಿಗಳು).—ಸ್ವಾಮಿ, ನಾನು ಸಭೆಯ ಮುಂದೆ ಮಂಡಿಸತಕ್ಕ ಖೋತಾ ಸೂಚನೆ ಈ ರೀತಿ ಇದೆ :

"The demand under the head '18. Other Revenue Expenditure financed from Ordinary Revenue—A. Irrigation Works for

Rs. 3,00,000 be reduced by Rs. 100 (to urge upon the Government the urgent need for restoration of tanks by desilting in Nanjangud Taluk).''

ಸ್ವಾಮಿ, ನಂಜನಗೂಡು ತಾಲ್ಲೂಕಿನಲ್ಲಿ ಅನೇಕ ವರ್ಷಗಳಿಂದ ಕೆಲವು ಕೆರೆಗಳು ಹೂಳು ತುಂಬಿಕೊಂಡಿವೆ. ಹೂಳು ತೆಗೆಸಿಕೊಡಬೇಕೆಂದು ಅನೇಕ ಸಾರಿ ಸಂಬಂಧಪಟ್ಟ ಇಲಾಖೆಯವರನ್ನು ಆ ತಾಲ್ಲೂಕಿನ ರೈತರು ಕೇಳಿಕೊಂಡಿದ್ದರೂ ಸಹ ಅವರು ಅನೇಕ ಸಾರಿ ಪರಿಶೀಲನೆ ಮಾಡಿ ಕೆಲಸವಾಡದೆ ಹಾಗೆಯೇ ಬಿಟ್ಟಿದ್ದಾರೆ. ಇದಕ್ಕೆ ಕಾರಣವೇನೋ ಗೊತ್ತಿಲ್ಲ. ರೆವಿನ್ಯೂ ಮಂತ್ರಿಗಳು ಮೈಸೂರು ಜಿಲ್ಲೆಯಲ್ಲಿ ಕಳೆದ ತಿಂಗಳು 20–24ನೆಯ ತಾರೀಖು ಸಂಚಾರ ಮಾಡಿದಾಗ ಇಂಥ ಒಂದೆರಡು ಕೆರೆಗಳನ್ನು ನೋಡಿದ್ದಾರೆ.

ಶ್ರೀ ಕಡಿದಾಳ್ ಮಂಜಪ್ಪ (ರೆವೆನ್ಯೂ ಮತ್ತು ಮರಾಮತ್ ಶಾಖೆಗಳ ಮಂತ್ರಿಗಳು).—ನಾನು ಅಲ್ಲಿಗೆ ಬಂದಾಗ ತಾವು ಇರಲಿಲ್ಲ.

ಶ್ರೀ ಎಂ. ಮಾದಯ್ಯ.—ಕೆಲವು ಅನಾನುಕೂಲಗಳಿಂದ ಆ ದಿವಸ ನಾನು ಅಲ್ಲಿರಲು ಸಾಧ್ಯವಾಗಲಿಲ್ಲ.

ನರಸಾಂಬುಧಿ ಕೆರೆಯು ಬಹಳ ವಿಶಾಲವಾದ ಕೆರೆ, ಅದು ವಿಪರೀತವಾಗಿ ಹೂತುಹೋಗಿರುವುದನ್ನು ಮಂತ್ರಿಗಳೇ ಕಣ್ಣಾರ ನೋಡಿದ್ದಾರೆ. ಅದಕ್ಕೆ ಅಂದಾಜು ತಯಾರುಮಾಡಿಸಿ ಕೂಡಲೆ ಹೂಳು ತೆಗೆಸುವುದು ಅತ್ಯಾವಶ್ಯಕ. ಆದಷ್ಟು ಬೇಗ ಈ ಕೆಲಸವನ್ನು ಮಾಡಿಸಬೇಕೆಂದು ಆ ತಾಲ್ಲೂಕಿನ ಪ್ರತಿನಿಧಿಯಾಗಿ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಈ ಕೆರೆ ನಂಜನಗೂಡಿನಿಂದ ಚಾಮರಾಜನಗರಕ್ಕೆ ಹೋಗುವಾಗ ಸುಮಾರು ಐದಾರು ಮೈಲಿ ದೂರದಲ್ಲಿ ದಾರಿಯ ಪಕ್ಕದಲ್ಲೇ ಇದೆ. ಇದನ್ನು ಅರಸಿನಕೆರೆ ಅಥವಾ ನರಸಾಂಬುಧಿಕೆರೆ ಎಂದೂ ಕರೆಯುತ್ತಾರೆ. ಇದರ ಅಚ್ಚುಕಟ್ಟು ಸುಮಾರು 500 ಎಕರೆಯಿಂದ ಸಾವಿರ ಎಕರೆಗಳವರೆಗಿದೆ.

ಇನ್ನೊಂದು ಹಳೇಪುರದ ಕೆರೆ ಎಂದಿದೆ. ಆ ಕೆರೆಯೂ ಸಹ ಹೂತು ಹೋಗಿ ಕೆರೆಯಲ್ಲಿ ನೀರೇ ಇಲ್ಲದೆ, ಅಚ್ಚುಕಟ್ಟಿಗೆ ನೀರು ಇಲ್ಲದೆ ಅಚ್ಚುಕಟ್ಟಿನ ರೈತರು ಬಹಳ ತೊಂದರೆ ಪಡುತ್ತಿದ್ದಾರೆ. ತಮಗೇ ಗೊತ್ತಿರುವ ಹಾಗೆ ನಂಜನಗೂಡು ತಾಲ್ಲೂಕಿನಲ್ಲಿ ಈ ಕೆರೆಗಳಿರತಕ್ಕ ಭಾಗ ಕಪಿಲಾ ನದಿಯಿಂದ ಹೊರಡುವ ನಾಲೆಯ ಪ್ರದೇಶಕ್ಕೆ ಸೇರಿರುವುದಿಲ್ಲ. ಈ ಎರಡು ಕೆರೆಗಳಿಂದಲೇ ಆ ರೈತರಿಗೆ ನೀರಾವರಿ ಕೆಲಸ ನಡೆಯಬೇಕಾಗುತ್ತದೆ. ಆದುದರಿಂದ ಸರ್ಕಾರದವರು ಈ ಎರಡು ಕೆರೆಗಳಲ್ಲಿ ತಕ್ಷಣ ಹೂಳು ತೆಗೆಸಬೇಕು. ಆ ತಾಲ್ಲೂಕಿನಲ್ಲಿ ಇನ್ನೂ ಹೂಳು ತೆಗೆಸಬೇಕಾದ ಸಣ್ಣಪುಟ್ಟ ಕೆರೆಗಳಿವೆ. ಆದರೂ ಈ ಎರಡು ಕೆರೆಗಳನ್ನಾದರೂ ಈ ಸಾರಿ ಚಾಲ್ತಿ ಸಾಲಿನಲ್ಲಿ ಅಂದಾಜು ತಯಾರು ಮಾಡಿಸಿ ಆದಷ್ಟು ಬೇಗ ಹೂಳು ತೆಗೆಸಬೇಕೆಂದು ಸರ್ಕಾರದವರನ್ನು ಒತ್ತಾಯಪಡಿಸುತ್ತೇನೆ. ರೆವೆನ್ಯೂ ಮಂತ್ರಿಗಳು ನೋಡಿದ ನಂಜನಗೂಡು ತಾಲ್ಲೂಕಿನ ಆ ಪ್ರದೇಶದಲ್ಲಿ ಸಾಕಷ್ಟು ಬೆಳೆಯಾಗದೆ ಅದು ಡಿಸ್ಟ್ರೆಸ್ ಪ್ರದೇಶವೆಂದು ತಮ್ಮ ಅವಗಾಹನೆಗೆ ರೆವೆನ್ಯೂ ಮತ್ತು ಇತರ ಅಧಿಕಾರಿಗಳು ತಂದಿರತಕ್ಕ ವಿಚಾರವನ್ನು ಕೇಳಿದ್ದೇನೆ. ಕಾರಣಾಂತರದಿಂದ ರೆವಿನ್ಯೂ ಮಂತ್ರಿಗಳು ಅಲ್ಲಿಗೆ ಬಂದ ದಿನ ನಾನು ಬರುವುದಕ್ಕೆ ಸಾಧ್ಯವಾಗದಿದ್ದರೂ ಸಹ ಆ ಪ್ರದೇಶದ ಪ್ರತಿನಿಧಿಗಳು ಅವರ, ಅಂದರೆ ಮಾನ್ಯ ಮಂತ್ರಿಗಳ ಗಮನಕ್ಕೆ ಈ ವಿಷಯವನ್ನು ತಂದಿದ್ದಾರೆಂದು ತಿಳಿದುಬಂದಿದೆ. ಆದುದರಿಂದ ತಾವು ಈ ಬಾಬಿಗೆ ಕೊಟ್ಟಿರತಕ್ಕ ಮೂರು ಲಕ್ಷ ರೂಪಾಯಿಗಳಲ್ಲಿ ಒಂದು ಭಾಗವನ್ನು ವಿನಿಯೋಗಿಸಿ ಈ ಎರಡು ಕೆರೆಗಳ ಹೂಳು ತೆಗೆಸಿ ಇವುಗಳನ್ನು ಆಳಮಾಡಿ ಕೊಡಬೇಕೆಂದು ಒತ್ತಾಯಪೂರ್ವಕವಾಗಿ ತಮ್ಮನ್ನು ಕೇಳಿಕೊಂಡು ಈ ಖೋತಾ ನಿರ್ಣಯವನ್ನು ಸಭೆಯ ಮುಂದಿಡುತ್ತೇನೆ.

Mr. SPEAKER.—Cut motion moved :

"That the demand be reduced by Rs. 100."

Sri M. LINGANNA (Nanjangud).—Sir, I wholeheartedly support the cut motion moved by Sri M. Madiah. Of course he referred to only two tanks. I do not agree with him when he says that only three hoblis are completely fed by this tank water. Kaulande Hobli, Hullahalli Hobli and certain parts of Kasaba Hobli are also fed. Arasinakere belongs to Kasaba Hobli. The atchkat is nearly 800 acres. When the Hon'ble Ministers toured this area I think probably the Deputy Commissioner did draw their attention to this tank which is the biggest tank in the whole of this taluk. Probably they saw that the whole tank was silted up.

(ಕೆಲವು ಸದಸ್ಯರು ಕನ್ನಡದಲ್ಲಿ ಹೇಳಬೇಕೆಂದು ಸೂಚಿಸಿದರು).

ಈ ಕೆರೆಯನ್ನು ತಾವು ನೋಡಿದಾಗ............

ಅಧ್ಯಕ್ಷರು.—ಇದುವರೆಗೂ ತಾವು ಇಂಗ್ಲಿಷಿನಲ್ಲಿ ಹೇಳಿದುದನ್ನೇ ಪುನಃ ಕನ್ನಡದಲ್ಲಿ ಹೇಳಬೇಡಿ. ಹೊಸ ಹೊಸ ವಿಷಯವೇನಾದರೂ ಇದ್ದರೆ ಹೇಳಿ.

ಶ್ರೀ ಎಂ. ಲಿಂಗಣ್ಣ.—ರೆವೆನ್ಯೂ ಮಂತ್ರಿಗಳು ಆ ಕೆರೆಯನ್ನು ನೋಡಿದಾಗ ಡೆಪ್ಯುಟಿ ಕಮೀಷನರು ಇದರ ವಿಷಯ ಹೇಳಿರಬಹುದು. ಇದು ಆ ತಾಲ್ಲೂಕಿನಲ್ಲೇ ಬಹಳ ದೊಡ್ಡಕೆರೆ. ಶ್ರೀಮಾನ್ ಮರಿಯಪ್ಪನವರು ಹಿಂದೆ ಆಹಾರ ಮಂತ್ರಿಗಳಾಗಿದ್ದಾಗ ಈ ಕೆರೆಯನ್ನು ಹೂಳು ತೆಗೆಸುವುದಾಗಿ ಭರವಸೆ ಕೊಟ್ಟಿದ್ದರು, ಪ್ರಯತ್ನ ಮಾಡಿದ್ದರು. ಆದರೆ ಈ ಕಾರ್ಯ ನಡೆಯದೆ ಹಾಗೆಯೇ ನಿಂತುಹೋಗಿದೆ. ಈ ಕೆರೆಯ ಅಚ್ಚುಕಟ್ಟಿನಲ್ಲಿ...............

ಶ್ರೀ ಕಡಿದಾಳ್ ಮಂಜಪ್ಪ.—ಈಚೆಗೆ ಆ ಕೆರೆಯಲ್ಲಿ ನೀರು ನಿಂತಿರುವ ಹಾಗೆ ಕಾಣುತ್ತದೆ.

ಶ್ರೀ ಎಂ. ಲಿಂಗಣ್ಣ.—ಇಲ್ಲ, ಬತ್ತಿಹೋಗಿದೆ. ಅದು ತಟ್ಟೆ ಇದ್ದಹಾಗಿದೆ. ಮಧ್ಯೆ ಒಂದು ಕಾಲುವೆಯ ಹಾಗೆ ಬಂದು ಅದರಿಂದ ನೀರೆಲ್ಲ ಹೊರಗೆ ಹೋಗಿದೆ. ಹಿಂದೆ ಒಂದು ಸಿಲ್ಟ್ ಟ್ರ್ಯಾಪಿನ ಹಾಗೆ ಒಂದು ಸಾಧನವನ್ನು ಮಾಡಿದ್ದರು. ಅದರಿಂದ ಕೆರೆ ಹೂಳು ತುಂಬುತ್ತಿರಲಿಲ್ಲ. ಆ ಭಾಗ ಈಗ ಪೂರ್ಣವಾಗಿ ಹೂತುಹೋಗಿದೆ. ಅದನ್ನು ಪುನಃ ಉದ್ಧಾರ ಮಾಡದೇಯಿದ್ದರೆ ಹೂಳು ತೆಗೆಯುವುದಕ್ಕಾಗುವುದಿಲ್ಲ, ಎಷ್ಟೇ ಖರ್ಚು ಮಾಡಿದರೂ ಸಾಧ್ಯವಿಲ್ಲವೆಂದು ಹೇಳುತ್ತಾರೆ. ಆದಕಾರಣ ಆ ಭಾಗ ಎಲ್ಲಿ ಹೂತುಹೋಗಿದೆ ಎಂದು ನೋಡಿ, ಹುಡುಕಿ ಪತ್ತೆ ಮಾಡಿ ಆ scientific device ಅನ್ನು ಸರಿಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ದೇಬೂರು ಕೆರೆ ಎಂಬುದು ಒಬ್ಬರು ಇನಾಂ

(ಶ್ರೀ ಎಂ. ಲಿಂಗಣ್ಣ)

ದಾರರಿಗೆ ಸೇರಿದುದು. ಆ ಕೆರೆಯನ್ನು ಬತ್ತಿಸಿ, ಅವರು ಆ ಭಾಗವನ್ನು ಆಕ್ರಮಿಸಿಕೊಂಡು ಸುಮಾರು 25-30 ಎಕರೆಯಷ್ಟು ಪ್ರದೇಶವನ್ನು ತರೀ ಜಮೀನು ಮಾಡಿಕೊಂಡು ವಾರಕ್ಕೆ ಕೊಟ್ಟುಕೊಂಡಿದ್ದಾರೆ. ಇದು unauthorised occupation ಆಗಿದೆ. ಈ ದೇಬೂರು ಕೆರೆಯನ್ನು ಉದ್ಧಾರ ಮಾಡಿದರೆ ಸುಮಾರು ಐನೂರು, ಆರುನೂರು ಎಕರೆಗೆ ನೀರಾವರಿ ಮಾಡಬಹುದು. ಹುಲ್ಲಹಳ್ಳಿ ಹೋಬಳಿಯಲ್ಲಿ ಬೇಕಾದಷ್ಟು ಸಣ್ಣಸಣ್ಣ ಕೆರೆಗಳಿವೆ. ಆ ಕೆರೆಗಳನ್ನು ಆಬಾದು ಮಾಡದೆ ಹೂತು ಹೋಗಿ ನೀರು ನಿಲ್ಲಲು ಅವಕಾಶವಿಲ್ಲವಾಗಿದೆ. ಕೌಲಂದೆ ಹೋಬಳಿ, ಕಸಬ ಹೋಬಳಿ, ಹುಲ್ಲಹಳ್ಳಿ ಹೋಬಳಿ ಇಲ್ಲಿನ ಕೆರೆಗಳು ಹೀಗಾಗಿವೆ. ಕಲ್ಲುಕುಂದದ ಕೆರೆಯನ್ನು ಎರಡು ಸಾವಿರ ರೂಪಾಯಿ ಖರ್ಚಿನಲ್ಲಿ ಮೊನ್ನೆತಾನೇ ಜೀರ್ಣೋದ್ಧಾರ ಮಾಡಿದ್ದಾರೆ. ಇದು ಸಾಕಾಗುವುದಿಲ್ಲ. ಸಂಬಂಧಪಟ್ಟ ಅಧಿಕಾರಿಗಳನ್ನು ಕೇಳಿದಾಗ ಆ ತಾಲ್ಲೂಕಿಗೆ ಹಣ ಮಂಜೂರಾಗಿಲ್ಲವೆಂದು ಹೇಳಿದರು. ಈಗಲಾದರೂ ಏರ್ಪಾಡು ಮಾಡಿ ಈ ಕಾರ್ಯವನ್ನು ಕೈಕೊಂಡರೆ, ಈ ಪ್ರದೇಶದಲ್ಲಿ ಕೆರೆಗಳು ಜೀರ್ಣೋದ್ಧಾರವಾಗಿ ಇನ್ನೂ ಹೆಚ್ಚಾಗಿ ಬತ್ತ ಸಿಕ್ಕುತ್ತದೆಂದು ಹೇಳಬಯಸುತ್ತೇನೆ. ಈ ದೃಷ್ಟಿಯಿಂದ ಈ ನಾಲ್ಕಾರು ಕೆರೆಗಳನ್ನು ಬೇಗ ಜೀರ್ಣೋದ್ಧಾರ ಮಾಡಿಸಿ ಫಲಕಾರಿಯಾಗುವಂತೆ ಮಾಡಬೇಕೆಂದು ಸೂಚಿಸುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪ.—ಮಾನ್ಯ ಸದಸ್ಯರು ಪ್ರಸ್ತಾಪಿಸಿದ ವಿಷಯವನ್ನು ಸರ್ಕಾರದವರು ಸಹಾನುಭೂತಿಯಿಂದ ಪರಿಶೀಲಿಸಿ, ಆದಷ್ಟು ಜಾಗ್ರತ ಈ ಕೆರೆಗಳ ಜೀರ್ಣೋದ್ಧಾರ ಕಾರ್ಯವನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆಂದು ಭರವಸೆ ಹೇಳಿದಮೇಲೆ, ನಮ್ಮ ಮಿತ್ರರು ತಮ್ಮ ಖೋತಾ ಸೂಚನೆಯನ್ನು ವಾಪಸು ಪಡೆಯುತ್ತಾರೆಂದು ನಂಬಿದ್ದೇನೆ.

Mr. SPEAKER.—What does the mover of the cut motion propose to do?

ಶ್ರೀ ಎಂ. ಮಾದಯ್ಯ.—ಮಾನ್ಯ ಮಂತ್ರಿಗಳು ಆಶಾದಾಯಕವಾದ ಉತ್ತರ ಕೊಟ್ಟಿರುವುದರಿಂದ ನನ್ನ ಖೋತಾ ಸೂಚನೆಯನ್ನು ವಾಪಸ್ಸು ತೆಗೆದುಕೊಳ್ಳಲು ಸಭೆಯ ಅನುಮತಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

The cut motion was, by leave withdrawn.

Expenditure on construction and restoration of on tanks.

Sri S. SRINIVASA IYENGAR. I move my cut motion which is as follows:—

> "The demand under the head '18. Other Revenue Expenditure financed from Ordinary Revenue—A. Irrigation works' for Rs. 3,00,000 be reduced by Rs. 100 (to ascertain the amount spent during this year on construction and restoration of minor tanks and on the restoration of tanks by desilting."

ಸ್ವಾಮಿ, ಈಗ ಈ ಖೋತಾ ನಿರ್ಣಯವನ್ನು ಸೂಚಿಸುವುದಕ್ಕೆ ಒಂದು ಕಾರಣವಿದೆ. ಕೇವಲ ಅರಿಕೆಯ ರೂಪದಲ್ಲಿ ನಮ್ಮ ಕೆರೆ ರಿಪೇರಿ ಮಾಡಿಸಿಕೊಡಿ ಎಂದು ಕೇಳುವುದಕ್ಕಿಂತ, ಈ ಬಾಬಿನಲ್ಲಿ ಸೇರಿರತಕ್ಕ ಹಣ ಯಾವ ರೀತಿ ವ್ಯಯವಾಗುತ್ತದೆ, ಈಗ ವ್ಯಯವಾಗುತ್ತಿರುವ ರೀತಿಯಲ್ಲಿ ಶಾಶ್ವತವಾದ ಕೆಲಸ ಮಾಡಿದಂತಾಗುತ್ತದೆಯೆ, ಖರ್ಚಾಗುವ ಹಣ ನ್ಯಾಯವಾಗಿ ಖರ್ಚಾಗುತ್ತಿದೆಯೆ ಎಂಬುದನ್ನೆಲ್ಲಾ ವಿಮರ್ಶೆ ಮಾಡುವ ದೃಷ್ಟಿಯಿಂದ ಇದನ್ನು ಸೂಚಿಸಿದ್ದೇನೆ. ಈಗ ಸಂಸ್ಥಾನದಲ್ಲಿರುವ ಮೇಜರ್ ಮತ್ತು ಮೈನರ್ ಕೆರೆಗಳ ಉಸ್ತುವಾರಿ ಮತ್ತು ಆಡಳಿತ ರೆವಿನ್ಯೂ ಇಲಾಖೆಯ ತರಫ್ ನಡೆಯುತ್ತಿದೆ. ಪಬ್ಲಿಕ್ ವರ್ಕ್ಸ್ ಇಲಾಖೆಗೂ ಮೇಜರ್ ಮೈನರ್ ಕೆರೆಗಳ ರಿಪೇರಿಗೂ ಯಾವ ಸಂಬಂಧವೂ ಈಗಿಲ್ಲ. ಇದಕ್ಕೆ ಸಂಬಂಧಪಟ್ಟ ಕೆಲಸಕಾರ್ಯಗಳೆಲ್ಲವೂ ರೆವಿನ್ಯೂ ಏಜೆನ್ಸಿ ಮೂಲಕವೇ ನಡೆಯುತ್ತಿವೆ. ಅಲ್ಲದೆ ಕೆಲವು ಕೆರೆಗಳು ರಿಪೇರಿಯಾದ ನಂತರ ಅಚ್ಚುಕಟ್ಟುದಾರರ ಮೇಲೆ ಖರ್ಚು ಹಾಕಿ ಒಂದು ದಾವಾಪಾಷಾ ಮೇಲೆ ಅವರಿಂದ ವಸೂಲು ಮಾಡುತ್ತಿದ್ದಾರೆ. ಇದು ಸಾಧುವಾದುದಲ್ಲ. ಹೇಗೂ ರೆವಿನ್ಯೂ ಆಡಳಿತದಲ್ಲಿ ಕೆರೆಗಳಿರಬಾರದು. ಯಾವ ಕೆರೆಯೂ ಇದರಿಂದ ರಿಪೇರಿಯಾಗುವುದಿಲ್ಲ. ಮಾನ್ಯ ಸಚಿವರು ಸ್ವಲ್ಪ ದಿವಸಗಳ ಹಿಂದೆ ಟಿ.-ನರಸೀಪುರದ ತಾಲ್ಲೂಕಿನಲ್ಲಿ ಸಂಚಾರ ಬಂದಿದ್ದಾಗ ಕರೆದುಕೊಂಡು ಹೋಗಿ ತೋರಿಸಿರುತ್ತೇನೆ. ಟಿ.-ನರಸೀಪುರದ ತಾಲ್ಲೂಕಿನಲ್ಲಿ ಆಲ್ಲೂರು ಕೆರೆ ಎಂದು ಒಂದು ಕೆರೆಯಿದೆ. ಆ ಕೆರೆಯ ಅಂಗಳದ ವಿಸ್ತೀರ್ಣವೇ 140 ಎಕರೆಯಷ್ಟಿದೆ. ಎರಡು ಮೈಲಿ ಉದ್ದ ಫೀಡರ್ ಚಾನಲ್ ಇದೆಯೆಂಬುದನ್ನು ಇದುವರೆಗೆ ಯಾರೂ ನೋಡಿಲ್ಲ. ಹಿಂದೆ ಈ ಕೆರೆಗೆ ಸಲೀಸಾಗಿ ನೀರು ಬಂದು ಕೆರೆ ತುಂಬಿ ಜಮೀನಿನಲ್ಲಿ ಫಸಲು ಮಾಡುತ್ತಿದ್ದೆವು. ಆ ಕೆರೆಗೆ ಹತ್ತಾರು ವರ್ಷಗಳಿಂದ ಸಂಪೂರ್ಣವಾಗಿ ನೀರು ತುಂಬುವುದಿಲ್ಲ. ಅಚ್ಚುಕಟ್ಟಿನಲ್ಲಿ ಫಸಲು ಬೆಳೆಯುತ್ತಿಲ್ಲ. ಆ ರೈತರು ಹೊಟ್ಟೆಗಿಲ್ಲದೆ ಸಾಯುವ ಸ್ಥಿತಿಗೆ ಬಂದಿದ್ದರೂ ಇದುವರೆಗೂ ಏನೂ ಅನುಕೂಲವಾಗಿಲ್ಲ. ಅದುದರಿಂದ ಮೇಜರ್ ಮತ್ತು ಮೈನರ್ ಕೆರೆಗಳ ಆಡಳಿತವನ್ನು ರೆವಿನ್ಯೂ ಇಲಾಖೆ ಇಟ್ಟುಕೊಳ್ಳಬಾರದು. ಇದರಿಂದ ಕೆಲಸ ನಡೆಯುವುದಿಲ್ಲ. ಪಬ್ಲಿಕ್ ವರ್ಕ್ಸ್ ಇಲಾಖೆಗೇ ಸೇರಿಸಬೇಕು. ಈಗ ಮಾಡುತ್ತಿರುವ ರೀತಿ ಮಾಡಿದರೆ ಕೆಲಸ ಶಾಶ್ವತವಾಗಿ ನಿಲ್ಲುವುದಿಲ್ಲ.

ಎರಡನೆಯದಾಗಿ, ಡೀಸಿಲ್ಟಿಂಗ್ ಅಥವಾ ಹೂಳು ತೆಗೆಯುವುದು. ಇದಕ್ಕೆ ಎಷ್ಟೇ ಹಣ ಖರ್ಚು ಮಾಡಿದರೂ ಪ್ರಯೋಜನವಿಲ್ಲ. ಹೂಳು ಕೆರೆಗೆ ಬಾರದೇಯಿರುವ ಹಾಗೆ ಯಾವ ವಿಧವಾದ silt-trap ವಗೈರೆ ಏರ್ಪಾಡು ಮಾಡಿಲ್ಲ.

ಈಗ ತಾವು ಹೂಳನ್ನು ತೆಗೆಸಬೇಕೆಂದು ಕೇಳುತ್ತಿರುವ ಕೆರೆಗಳಲ್ಲಿ ಹೂಳನ್ನು ತೆಗೆಸದೆ ಹಾಗೆಯೇ ಬಿಟ್ಟುಬಿಟ್ಟರೆ ಕೆರೆಗಳಿಗೆ ಪುನಃ ಪುನಃ ನೀರು ಭರ್ತಿಯಾಗುತ್ತ ಬಂದು ಹೂಳು ಇನ್ನೂ ಹೆಚ್ಚಾಗಿ ನಿಲ್ಲುತ್ತದೆ. ಕಾಲಕಾಲಕ್ಕೆ ಸರಿಯಾಗಿ ರಿಪೇರಿ ಕೆಲಸವನ್ನು ಮಾಡದೆ ಕೈಬಿಟ್ಟ ಪಕ್ಷದಲ್ಲಿ ಮುಂದಕ್ಕೆ ಇನ್ನೂ ಹತ್ತಾರು ವರ್ಷಗಳ ಕಾಲದ ಮೇಲೆ ಆ ಹೂಳನ್ನು ತೆಗೆನತಕ್ಕ ಬಗ್ಗೆ ಈಗೇನು ಅಲ್ಪ ಸ್ವಲ್ಪ ಹಣದ ಖರ್ಚಿನಲ್ಲೇ ಸಾಧ್ಯವಾಗುತ್ತಿತ್ತೋ ಅದು ಮುಂದೆ ಒಂದು ನೂರು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರೂ ಸಾಧ್ಯವಾಗುವುದಿಲ್ಲ. ಅಷ್ಟೇ ಅಲ್ಲದೆ ನಾವು ಕೆರೆಗಳಿಗಾಗಿ ಖರ್ಚು ಮಾಡಿದ ಹಣವೆಲ್ಲವೂ ವ್ಯರ್ಥವಾದಂತಾಗುತ್ತದೆ. ಟಿ. ನರಸೀಪುರದ ತಾಲ್ಲೂಕಿನಲ್ಲಿ ಕೊಳತೂರು ಎಂಬ

ಗ್ರಾಮದ ಕೆರೆಯ ಏರಿಯು ನೀರು ನಿಲ್ಲುವ ಮಟ್ಟಕ್ಕೆ ಕೇವಲ ಒಂದು ಅಡಿ ಮೇಲೆ ಮಾತ್ರವಿರುತ್ತದೆ. ಆ ಕೆರೆಯ ಕೆಳಗೆ ಸುಮಾರು ಒಂದು ಸಾವಿರ ಪಲ್ಲ ಬೆಳೆಯಾಗುತ್ತದೆ. ಹೀಗೆ ಇಂಥ ಅನುಕೂಲವಾಗಿರತಕ್ಕ ದೊಡ್ಡ ದೊಡ್ಡ ಕೆರೆಗಳ ದುರಸ್ತನ್ನು ಸರ್ಕಾರದವರು ಏತಕ್ಕಾಗಿ ನಡೆಸುತ್ತಿಲ್ಲವೆಂಬುದನ್ನು ತಿಳಿಯುವುದು ಕಷ್ಟವಾಗಿದೆ, ಮತ್ತು ಅಂಥ ಕೆಲಸಗಳಿಗೆ ಮೊದಲು ಸರ್ಕಾರದವರು ತಮ್ಮ ನಿಗ ಕೊಡುವಂತೆ ಮಾಡಬೇಕೆಂಬ ಉದ್ದೇಶದಿಂದ ನಾನು ಈ ಖೋತಾ ನಿರ್ಣಯ ತಂದಿದ್ದೇನೆ.

ಮತ್ತೊಂದು ವಿಷಯವೇನೆಂದರೆ, ಈ ಕೆರೆಗಳಿಗೆ ನೀರು ಸರಬರಾಯಿ ಮಾಡತಕ್ಕ Feeder Channel ಗಳ ಕೊನೆಯಲ್ಲಿ ಅವುಗಳಲ್ಲಿ ಬರತಕ್ಕ ಹೂಳನ್ನು ಕೆರೆಯೊಳಕ್ಕೆ ಬಿಡದಂತೆ ತಡೆಯತಕ್ಕ ಸಿಲ್ಟ್ ಟ್ರ್ಯಾಪ್ ಗಳನ್ನು ಹಾಕಬೇಕೆಂದು ಸಲಹೆ ಕೊಡುತ್ತೇನೆ. ಆದರೆ ಅಂಥ ಸಿಲ್ಟ್ ಟ್ರ್ಯಾಪ್‌ಗಳನ್ನು ಈಗಾಗಲೇ ಹಾಕಿರತಕ್ಕ ಸ್ಥಳಗಳಲ್ಲಿ ಎಲ್ಲಿ ಹಾಕಿದ್ದಾರೆಂಬುದನ್ನೇ ಕಂಡುಹಿಡಿಯುವುದಕ್ಕಾಗುವುದಿಲ್ಲ ಈ ಕೆಲಸವನ್ನು ಸರ್ಕಾರ ಯಾವ ಇಲಾಖೆಗೆ ವಹಿಸಿತ್ತೋ ಬಹುಶಃ ಅವರಿಗೇನಾದರೂ ಗೊತ್ತಿದ್ದರೆ ಇರಬಹುದು. ಇದು ಸರ್ಕಾರಕ್ಕೇ ವೇದ್ಯವಾಗಬೇಕು. ಆದರೆ ಈಗ ಈ ಕೆಲಸಗಳೆಲ್ಲವೂ ಕಾಲಕಾಲಕ್ಕೆ ಸರಿಯಾಗಿ ರೆವಿನ್ಯೂ ಇಲಾಖೆಯಿಂದ ನಡೆಯುತ್ತಿಲ್ಲವಾದಕಾರಣ ಈ ಕೆಲಸಗಳನ್ನೆಲ್ಲಾ ಸಂಪೂರ್ಣವಾಗಿ ಇಂಜನಿಯರಿಂಗ್ ಇಲಾಖೆಗೆ ವಹಿಸಬೇಕು.

ಮೂರನೆಯದಾಗಿ ನಾನು ಈಗಾಗಲೇ ತಿಳಿಸಿರುವಂತೆ ನಮ್ಮ ತಾಲ್ಲೂಕಿಗೆ ಮಾನ್ಯ ಸಚಿವರು ಸಂಚಾರ ಬಂದಿದ್ದಾಗ್ಗೆ ಆ ತಾಲ್ಲೂಕಿನಲ್ಲಿ ಎಷ್ಟು ರಿಪೇರಿಯಾಗದ ಕೆರೆಗಳಿರುತ್ತವೆ, ಆ ಕಾರಣದಿಂದ ಅಲ್ಲಿಯ ಜನರಿಗೆಷ್ಟು ತೊಂದರೆಗಳಾಗಿರುತ್ತದೆಯೆಂಬುದನ್ನು ಅವರಿಗೆ ಕಣ್ಣಾರೆ ತೋರಿಸಿದ್ದೂ ಆಗಿದೆ. ಆ ತಾಲ್ಲೂಕಿನಲ್ಲಿ ಕೆರೆಗಳನ್ನು ರಿಪೇರಿ ಮಾಡುವ ಬದಲು ಅವುಗಳನ್ನೆಲ್ಲಾ ಒಡೆದುಹಾಕಿ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದಂಥ ಕೆರೆಗಳ ಅಂಗಳಗಳನ್ನೆಲ್ಲಾ ಮೈಸೂರು, ಬೆಂಗಳೂರು, ಮದ್ರಾಸು ಇತ್ಯಾದಿ ಸ್ಥಳಗಳಿಂದ ಅಠಾರಕಛೇರಿಗೆ ಬರುತ್ತಿದ್ದಂಥ ದೊಡ್ಡ ದೊಡ್ಡ ಮನುಷ್ಯರಿಗೆ ಸರಾಗವಾಗಿ ಹಂಚಿಬಿಟ್ಟಿದ್ದಾರೆ. ಹಿಂದಿನ ಕಾಲದವರು ಅಷ್ಟೊಂದು ಅಪಾರವಾದ ಹಣವನ್ನು ಖರ್ಚುಮಾಡಿ ಒಂದು ಪುಣ್ಯದ ಕೆಲಸವೆಂದು ಭಾವಿಸಿ ಆ ಕೆರೆಗಳನ್ನು ಕಟ್ಟಿಸಿದ್ದರು. ಆದರೆ ಈ ದಿವಸ ಅವುಗಳನ್ನೆಲ್ಲಾ ಒಡೆದುಹಾಕಲು ಪ್ರಯತ್ನಮಾಡಿದ್ದಾರೆ. ಹೀಗೆ ಒಡೆದುಹಾಕಿರತಕ್ಕ ಕೆರೆಗಳೆಲ್ಲವನ್ನೂ ಕೂಡಲೆ ಸರ್ಕಾರದವರು ಹೊಸದಾಗಿ ಕಟ್ಟಿಸಿಕೊಡಬೇಕೆಂದು ಹೇಳುತ್ತೇನೆ. ನಮ್ಮ ತಾಲ್ಲೂಕಿನಲ್ಲ ಈ ಕೆರೆಗಳ ದುರಸ್ತಿ ವಿಚಾರ ವಿಮರ್ಶೆಮಾಡಿನೋಡಿದರೆ ಕಳೆದ ಹತ್ತು ವರ್ಷಗಳಲ್ಲಿ ಎಲ್ಲೋ ಕೇವಲ ಒಂದೆರಡು ಕೆರೆಗಳಿಗೆ ಅಲ್ಪ ಸ್ವಲ್ಪ ಹಣವನ್ನು ಖರ್ಚುಮಾಡಿರುವಂತೆ ಕಾಣುತ್ತದೆ. ಹೀಗೆ ಇದನ್ನು ಉದಾಸೀನ ಮಾಡಿದ್ದರಿಂದಲೇ ಈಗ್ಗೆ ಕಳೆದ ಹತ್ತಾರು ವರ್ಷಗಳಿಂದ ಜನರು ಸರ್ಕಾರದವರು ತೆರೆದಿರತಕ್ಕ ರೇಷನ್ ಡಿಪೋಗಳ ಸುತ್ತಲೂ ದಿನಗಟ್ಟಲೆ ಕಾದು ಕುಳಿತು, ಸರ್ಕಾರದವರು ಕೊಡುವಂಥ ಅತ್ಯಲ್ಪ ಪ್ರಮಾಣದ ಪಡಿತರಕ್ಕೆ ಕೈಯೊಡ್ಡಿ, ಅವರನ್ನು ಕಾಡಿ ಬೇಡಿಕೊಳ್ಳುವಂಥ ಸ್ಥಿತಿ ಬಂದುಹೋಗಿದೆ.

ಇನ್ನೊಂದು ವಿಷಯವೇನೆಂದರೆ—ತಾವು ಬಡ್ಜೆಟ್ಟಿನಲ್ಲಿ ಲಿಫ್ಟ್ ಇರಿಗೇಷನ್ನಿಗಾಗಿ ತೆಗೆದಿಡಲಾಗಿದ್ದ 5 ಲಕ್ಷ ರೂಪಾಯಿಗಳನ್ನು ಮತ್ತೆ ರಿಸರ್ವಿಗೆ ಸೇರಿಸಿಕೊಳ್ಳಬೇಕೆಂದು ತಾವು ಮಾಡಿರುತ್ತೀರಿ. ಇದು ನನ್ನ ಅಭಿಪ್ರಾಯದಲ್ಲಿ ಸರಿಯಲ್ಲ ಕಾಂಗ್ರೆಸ್ ಪಾರ್ಟಿಯ ಸದಸ್ಯರು 74 ಜನಗಳಿದ್ದು ನಮಗೆ ಬೆಂಬಲವಿಲ್ಲದೆ ಇರುವುದರಿಂದ ಈ ವಿಷಯ ತಮ್ಮಂತೆ ತೀರ್ಮಾನವಾಗಬಹುದು, ಆ ವಿಚಾರವೇನೇ ಇರಲಿ, ಈ ಲಿಫ್ಟ್ ಇರಿಗೇಷನ್ ಇರತಕ್ಕದ್ದು ಬಹಳ ಅಗತ್ಯವಾದುದು ಮತ್ತು ಅನುಕೂಲವಾದದ್ದೂ ಆಗಿದೆ. ದಕ್ಷಿಣ ದೇಶದಲ್ಲಿರುವ ಜನರು ಹಗಲೂ ರಾತ್ರಿ ನೀರನ್ನೆತ್ತಿ ದುಡಿಯುತ್ತಿರುವಂಥ ಸ್ವಭಾವ ನಮಗೆ ಬಂದಿಲ್ಲ. ಏತಕ್ಕೆಂದರೆ ಇಲ್ಲಿ ನಮಗೆ ಬೇಕಾದಷ್ಟು ಕೆರೆ—ಕಾಲುವೆ ಮತ್ತು ನಾಲಾ ಆಶ್ರಯಗಳಿರುವುದರಿಂದ ನಾವೇಕೆ ಅಷ್ಟು ಕಷ್ಟಪಡಬೇಕು ಎಂಬ ಒಂದು ತಾತ್ಸಾರ ಮನೋಭಾವ ಬಂದುಹೋಗಿದೆ. ಈಗಾಗಲೇ ಈ ಲಿಫ್ಟ್ ಇರಿಗೇಷನ್ ಬಗ್ಗೆ ನಾನಾ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುತ್ತಾರೆ. ಈ ಲಿಫ್ಟ್ ಇರಿಗೇಷನ್ನಿನಿಂದ ಇಂದು ಅನೇಕರು ಅದರ ಉಪಯೋಗವನ್ನು ಪಡೆಯುತ್ತಿರುವುದರಿಂದ ಅದರ ಬೆಲೆಯೇನೆಂಬುದನ್ನು ಚೆನ್ನಾಗಿ ಅರಿತುಕೊಂಡಿದ್ದಾರೆ. ಕೇವಲ ಜನ-ಜಾನುವಾರುಗಳೂ ಸಹ ಹೋಗಲಿಕ್ಕೆ ಅವಕಾಶವಿಲ್ಲದಂಥ ಸ್ಥಳಗಳಲ್ಲಿ ಕೂಡ ಈ ವಿಧಾನದಲ್ಲಿ ಸಾವಿರಾರು ಎಕರೆ ಜಮೀನನ್ನು ಸಾಗುವಳಿಗೆ ತಂದು ಈ ದಿನ ಬೆಳೆಯನ್ನಿಟ್ಟಿದ್ದಾರೆ. ಇಂಥ ಒಳ್ಳೆಯ ಸಿಸ್ಟಂನ್ನು ಇನ್ನೂ ಹೆಚ್ಚಿಸಬೇಕೇ ಶಿವಾಯಿ ತೆಗೆದು ಹಾಕತಕ್ಕದ್ದಾಗಲಿ ಅಥವಾ ತಪ್ಪಿಸತಕ್ಕದ್ದಾಗಲಿ ಸರ್ವಥಾ ಸಾಧುವಾದುದಲ್ಲ. ಅದನ್ನು ನಾವು ಒಪ್ಪುವುದಕ್ಕೂ ಆಗುವುದಿಲ್ಲ. ಅನೇಕ ನಾಲೆ ದಡದಲ್ಲಿರುವ ಖುಷ್ಕಿ ಜಮೀನನ್ನು ಸುಲಭವಾಗಿ ತರೀ ವ್ಯವಸಾಯಕ್ಕೆ ತರಬಹುದು. ಅಂಥ ಸದವಕಾಶ ನಮ್ಮ ತಾಲ್ಲೂಕಿನಲ್ಲಿ ಹರಿಯುತ್ತಿರುವ ಕಪಿಲಾನದಿ ದಡದಲ್ಲಿದೆ. ಸುಮಾರು ಹತ್ತುಸಾವಿರ ಎಕರೆ ಫಲವತ್ತಾದ ಜಮೀನಿರುತ್ತದೆ; ಆ ಖುಷ್ಕಿ ಜಮೀನುಗಳೆಲ್ಲವೂ ಬಹಳ ಫಲವತ್ತಾದ ಜಮೀನುಗಳು. ಎಕರೆಗೆ 20–25 ಪಲ್ಲ ಬತ್ತವನ್ನು ಬೆಳೆಯಬಹುದು. ಈಗ ನಾನೇ ಈ ಸಿಸ್ಟಂನಲ್ಲಿ ವರ್ಷಕ್ಕೆ ಮೂರು ಫಸಲನ್ನು ಧಾರಾಳವಾಗಿ ತೆಗೆಯುತ್ತಿದ್ದೇನೆ. ಇದು ಅಂಥ ಅನುಕೂಲವಾದ ಸಿಸ್ಟಂ ಆಗಿರುತ್ತೆಂಬುದು ಇನ್ನೂ ಅನೇಕ ಮಾನ್ಯ ಸದಸ್ಯರಿಗೆ ಈಗಾಗಲೇ ಮನವರಿಕೆ ಯಾಗಿರುತ್ತದೆ. ಆದ್ದರಿಂದ ಈ ಲಿಫ್ಟ್ ಇರಿಗೇಷನ್ ಸಿಸ್ಟಂನ್ನು ತಪ್ಪಿಸಬಾರದೆಂದು ತಿಳಿಸುವ ಉದ್ದೇಶದಿಂದ ನಾನು ಈ ಖೋತಾ ನಿರ್ಣಯವನ್ನು ಸಭೆಯಮುಂದೆ ಮಂಡಿಸುತ್ತೇನೆ.

Mr. SPEAKER.—Cut motion moved:

"That the demand be reduced by Rs. 100".

ಶ್ರೀ ಎಲ್. ಸಿದ್ದಪ್ಪ (ಚನ್ನಗಿರಿ).—ಸ್ವಾಮಿ, ಈಗ ತಾನೆ ಮಾತನಾಡಿದ ನನ್ನ ಮಾನ್ಯ ಸ್ನೇಹಿತರಾದ ಶ್ರೀಮಾನ್ ಶ್ರೀನಿವಾಸಯ್ಯಂಗಾರ್ ಅವರು, ಅವರ ಭಾಷಣದ ಕೊನೆಯಲ್ಲಿ ತಿಳಿಸಿರತಕ್ಕ ವಿಚಾರವನ್ನು ಎಂದರೆ ಲಿಫ್ಟ್ ಇರಿಗೇಷನ್ ವಿಚಾರವನ್ನು ಪುಷ್ಟೀಕರಿಸಲು ನಾನೀಗ ಎದ್ದುನಿಂತಿರುತ್ತೇನೆ, ಈ ಹಿಂದೆ ಸರ್ಕಾರದವರು ಹೋದವರ್ಷದ ಬಡ್ಜೆಟ್ಟಿನಲ್ಲಿ ಈ ಲಿಫ್ಟ್ ಇರಿಗೇಷನ್ನಿಗಾಗಿ ಏನು ಒಂದು ಮೊಬಲಗನ್ನು ತೆಗೆದು ಮೀಸಲಾಗಿಟ್ಟಿದ್ದರೋ ಅಂಥ ಮೊಬಲಗನ್ನು ಇಂದು ಅವರು ಸರ್ಕಾರಕ್ಕೆ ಸರೆಂಡರ್ ಮಾಡಿಕೊಳ್ಳಬಾರದೆಂಬ ಅಂಶವನ್ನು ಒತ್ತಿ ಹೇಳತಕ್ಕ ಬಗ್ಗೆ ನಾನು ಈಗ ಮಾತನಾಡಲು ಎದ್ದು ನಿಂತಿದ್ದೇನೆ.

ನಮ್ಮ ಶಿವಮೊಗ್ಗ ಟೌನಿನಲ್ಲೇ ಇರತಕ್ಕ ಮಾನ್ಯ ಸದಸ್ಯರಾದ ಶ್ರೀ ಎಸ್. ಆರ್. ನಾಗಪ್ಪಶೆಟ್ಟರು

(ಶ್ರೀ ಎಲ್. ಸಿದ್ದಪ್ಪ)

ಶಿವಮೊಗ್ಗ ಪಕ್ಕದಲ್ಲೇ ಈ ಲಫ್ಟ್ ಇರಿಗೇಷನ್ನಿಂದ ಎಷ್ಟರ ಮಟ್ಟಿಗೆ ಫಾಯಿದೆ ಹೊಂದುತ್ತಿದ್ದಾರೆಂಬುದು ಮಾನ್ಯ ಮಂತ್ರಿಗಳಿಗೂ ಮತ್ತು ಅನೇಕ ಇತರ ಸದಸ್ಯರುಗಳಿಗೂ ಗೊತ್ತಿದೆ. ಇದೇರೀತಿ ಲಕ್ಷ್ಮಣರಾಯರೆಂಬುವರೊಬ್ಬರು 2–3 ಇನಾಂ ಗ್ರಾಮಗಳಲ್ಲಿ ಹೀಗೆಯೇ ಲಫ್ಟ್ ಇರಿಗೇಷನ್ನಿನಿಂದ ಎಷ್ಟೊಂದು ಪ್ರಯೋಜನವನ್ನು ಹೊಂದುತ್ತಿದ್ದಾರೆಂಬ ವಿಷಯವನ್ನು ನಾವು ಅನೇಕರು ನೋಡಿದ್ದೇವೆ. ಹೀಗೆ ಇಂಥ ಬಾಬುಗಳನ್ನು ಸರ್ಕಾರದವರು ಹೆಚ್ಚಿಸಿ ತನ್ಮೂಲಕ ಜನರಲ್ಲಿ ಒಂದು ಹೆಚ್ಚಿನ ಆಸಕ್ತಿ ಹುಟ್ಟುವಂತೆ ಮಾಡಬೇಕಾದದ್ದು ಸೂಕ್ತವಾಗಿರುವಾಗ, ಅಂಥ ಬಾಬಿಗಾಗಿ ತೆಗೆದಿಡಲಾಗಿದ್ದ ಮೊಬಲಗನ್ನು ತಾವು ಆ ಬಾಬಿಗೆ ತಪ್ಪಿಸಬೇಕೆಂದು ಮಾಡಿರುವುದು ಸಾಧುವಾದುದಲ್ಲವೆಂಬುದನ್ನು ಒತ್ತಿ ಹೇಳಬೇಕೆಂಬ ಉದ್ದೇಶವೇ ಈಗ ನಾನು ಮಾತನಾಡುವುದಕ್ಕೆ ಮುಖ್ಯ ಕಾರಣ. ಇದಕ್ಕೆ ತಾವು ಇನ್ನೂ ಹೆಚ್ಚು ಹೆಚ್ಚಿನ ಉತ್ತೇಜನ ಕೊಡಬೇಕು. ಹೀಗೆ ಈ ಪದ್ಧತಿಯಿಂದ ತರೀ ವ್ಯವಸಾಯವನ್ನು ಹೆಚ್ಚಿಸಲು ಅವಕಾಶವಿರುವುದರಿಂದ ಕಳೆದ 4–5 ವರ್ಷಗಳಿಂದಲೂ ದೇಶದ ನಾನಾ ಭಾಗದ ಜನರು ಮನವಿಗಳ ಮೂಲಕ ಸರ್ಕಾರಕ್ಕೆ ಒತ್ತಾಯ ಪಡಿಸುತ್ತಲೇ ಬಂದಿದ್ದಾರೆ. ಈ ಹಿಂದೆ ಈ ಸಂಬಂಧವಾಗಿ ತುಂಗಭದ್ರ ನದಿ ದಡಗಳ ಮೇಲಿರುವ ಜಮೀನುಗಳಿಗೆ ಪವರ್ ಒದಗಿಸಲು ಒಂದು ಅಂದಾಜ ಸಹ ಮಾಡಲಾಗಿತ್ತು. ಅದಕ್ಕೆ ಸರ್ಕಾರದವರು ಏತಕ್ಕೆ ನಿಗಾ ಕೊಡಲಿಲ್ಲವೋ ತಿಳಿಯದಾಗಿದೆ. ಮಾನ್ಯ ಒಳಾಡಳಿತ ಮತ್ತು ರೆವೆನ್ಯೂ ಸಚಿವರುಗಳಿಬ್ಬರೂ ಆ ಪ್ರಾಂತ ಸಂಚಾರಮಾಡಿದಾಗ್ಗೆ ಈ ಬಗ್ಗೆ ಅನೇಕ ಮನವಿಗಳು ಬಂದಿವೆ. ಅವರು ಇದಕ್ಕೆ ಅನುಕೂಲಮಾಡಬೇಕೇ ಹೊರತು ಇದನ್ನು ನಿಲ್ಲಿಸಬಾರದು. ಇದರಿಂದ ನಮ್ಮ ರೈತರ ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳುವುದರ ಜೊತೆಗೆ ಸಂಸ್ಥಾನದಲ್ಲಿ ಉದ್ಭವಿಸಿರುವ ಆಹಾರದ ಕೊರತೆಯನ್ನು ನೀಗುವುದಕ್ಕೂ ಇದು ತುಂಬ ಸಹಕಾರಿಯಾಗಿದೆ. ಆದಕಾರಣ ಈ ಸಂಬಂಧವಾಗಿ ನನ್ನ ಮಿತ್ರರಾದ ಶ್ರೀ ಶ್ರೀನಿವಾಸಯ್ಯಂಗಾರ್ ಅವರು ಏನೇನು ಸಲಹೆಗಳನ್ನು ಕೊಟ್ಟಿದ್ದಾರೋ ಅವುಗಳೆಲ್ಲವನ್ನೂ ಒತ್ತಿ ಹೇಳತಕ್ಕ ಬಗ್ಗೆ ನಾನೀಗ ಮಾತನಾಡಿದ್ದೇನೆ. ಸರ್ಕಾರದವರು ಈ ಕೆಲಸಕ್ಕಾಗಿ ಯಾವ ಒಂದು ನಿಧಿಯನ್ನು ಒದಗಿಸಿದ್ದರೋ ಅದನ್ನು ಸರೆಂಡರ್ ಮಾಡಿಕೊಳ್ಳಬಾರದೆಂದು ಹೇಳುತ್ತೇನೆ.

Sri J. MOHAMED IMAM (Jagalur).—Sir, while supporting the cut motion moved ably by my friends Sri S. Srinivasa Iyengar and Sri L. Siddappa, I want to know one or two facts. There is absolutely no need to transfer the set amount apart for Lift Irrigation for the repairing and restoration of minor tanks. Sir, till now the provision for restoration of tanks and desilting was being made under the Budget, but in the Budget of the year 1952-53 we find that no provision has been made in the part first of the Budget, for items like restoration of minor tanks. On the other hand, in part II, a handsome provision has been made under these two heads—Maintenance and repairs, construction and restoration of minor tanks: 10 lakhs of rupees, Restoration of tanks and desilting: 5 lakhs of rupees. This comes under part II of the Budget under the development schemes. What I want to know is this. When 15 lakhs of rupees have been set apart for the restoration and also for desilting, has this amount been spent or is this amount available? I want to know the details. If the Government have already spent 15 lakhs of rupees, then there is no need to ask for supplementary grant. There is already 15 lakhs of rupees in the Budget; why not the Government spend it out of this item? What are the reasons for their asking for the extra grant while there is already 15 lakhs of rupees available for these items of expenditure? So in view of these, there is absolutely no need to appropriate it from the amount that has been set apart for Lift Irrigation. I want to know how the 15 lakhs of rupees have been spent towards the construction and restoration of minor tanks and also desilting as provided in the Budget or is this only a made up Budget just to show the people that they have made a grant, whereas that amount is not at all existing? I want to know these details.

Sri Kadidal MANJAPPA (Taking up the Budget copy from Sri J. Mohamed Imam).—I am getting the information Sir.

Mr. SPEAKER.—The House will now rise for lunch.

The House rose for lunch a three of the Clock and reassembled at Thirty Minutes Past three of the Clock.

[**M . SPEAKER.**—In the chair.]

Mr. SPEAKER.—The cut motions tabled hy Sri Madappa, Madhavachar and Sri Rachiah are similar to this cut motion. Strictly speaking, Sri Madhavachar's cut motion is inadmissible because it refers to channels. If these Members want to speak on this cut motion, it is better they do so. It is left to them. Instead of moving the cut motion separately, they can take

an opportunity to speak under this cut motion.

ಶ್ರೀ ಯು. ಎಂ. ಮಾದಪ್ಪ (ಚಾಮರಾಜನಗರ).—ಅಧ್ಯಕ್ಷರೇ, ಈ ದಿವಸ ೮ನೆಯ ಡಿಮ್ಯಾಂಡ್ ಹೆಡ್ಡಿನ Explanatory Note ನಲ್ಲಿ ತಾವು ಕ್ಷಾಮ ಪರಿಹಾರಾರ್ಥವಾಗಿ ಇಷ್ಟು ಮೊಬಲಗನ್ನು ಉಪಯೋಗಿಸುವುದಾಗಿ ತಿಳಿಸಿದ್ದೀರಿ. ಈ ಸಂದರ್ಭದಲ್ಲಿ ನಾನು ನನ್ನ ಅಭಿಪ್ರಾಯವನ್ನು ಹೇಳುವುದಾದರೆ, ತಾತ್ಕಾಲಿಕವಾಗಿ ಕೆರೆಗಳನ್ನು ಡಿ-ಸಿಲ್ಟ್ ಮಾಡುವುದಕ್ಕೆ ಸಾಧ್ಯವಿಲ್ಲ. ದೇಶಾದ್ಯಂತ ಸ್ವಲ್ಪ ದಿವಸಗಳ ಹಿಂದೆ ಮಳೆಯಾಗಿ ಕೆರೆಗಳಲ್ಲಿ ನೀರಿರುವಾಗ ಡೀ-ಸಿಲ್ಟ್ ಮಾಡುವುದು ಸಾಧ್ಯವೇ? ಅದು ಅಸಾಧ್ಯ. ನೀರಿರುವಾಗ ಡೀ-ಸಿಲ್ಟ್ ಮಾಡುವುದು ಹೇಗೆತಾನೆ ಸಾಧ್ಯ! ಈ ಅಂಶವನ್ನು ಗಮನಿಸಿದರೆ ಸರ್ಕಾರದವರು ಜನರಿಗೆ ಈ ಹಣದಿಂದ ಪರಿಹಾರ ಕೊಡುವ ದೃಷ್ಟಿಯಿಂದ ಕೇಳಿರುವಂತೆ ತೋರುವುದಿಲ್ಲ. ಏನೋ ಕೇವಲ ಜನರ ಕಣ್ಣೊರೆಸುವ ಒಂದು ಸಂಚನ್ನು ನಡೆಸುವ ಏರ್ಪಾಡಿನಲ್ಲಿರುವಂತೆ ಕಾಣುತ್ತದೆ. ನನಗನ್ನಿಸುತ್ತದೆ, ಸರ್ಕಾರದವರು ಇದಕ್ಕಾಗಿ ಎರಡು ತಿಂಗಳ ಅವಧಿಯನ್ನಾದರೂ ಕೇಳಬಹುದಾಗಿತ್ತು ಎಂದು. ಏಕೆಂದರೆ ಸದ್ಯಕ್ಕೆ ಇನ್ನೆರಡು ತಿಂಗಳವರೆಗೆ ಡೀಸಿಲ್ಟ್ ಮಾಡುವುದರ ಮೂಲಕ ಯಾವ ರಿಲೀಫ್ ವರ್ಕ್ಸ್ ಕೂಡ ತೆಗೆದುಕೊಳ್ಳುವುದಕ್ಕೆ ಸಾಧ್ಯವೇ ಇಲ್ಲ; ಆದ್ದರಿಂದ ಸದ್ಯಕ್ಕೆ ಈ ಮೂಲಕ ರೈತರಿಗೆ ಯಾವ ಪರಿಹಾರವನ್ನೊದಗಿಸುವುದಕ್ಕೂ ಸಾಧ್ಯವಿಲ್ಲ. ಈ ಅಂಶವನ್ನು ಸರ್ಕಾರದವರ ಗಮನಕ್ಕೆ ತರಬೇಕೆಂಬುದು ನಾನು ಖೋತಾ ಸೂಚನೆ ಕಳುಹಿಸಿದ್ದರಲ್ಲಿದ್ದ ಮೊದಲನೆಯ ಅಂಶ.

ಡೀ-ಸಿಲ್ಟ್ ಮಾಡುವುದಕ್ಕೆ ಬದಲು I. V. C. ರಸ್ತೆಗಳನ್ನಾದರೂ ಕೈಕೊಂಡರೆ ಜನರಿಗೆ ಬಹಳಮಟ್ಟಿಗೆ ಕೆಲಸ ಸಿಕ್ಕುವಂತಾಗುತ್ತದೆ. ಹೊಟ್ಟೆತುಂಬ ಅನ್ನ ಪಡೆಯಲು ಸಾಧ್ಯ. ಈ ಹಣವನ್ನು ಗ್ರೋ-ಮೋರ್-ಫುಡ್ ಬಾಬಿನಿಂದ I. V. C. ಕೆಲಸಗಳಿಗಾಗಲಿ, ಮತ್ಯಾವುದಕ್ಕಾಗಲೀ ವಿನಿಯೋಗಿಸಲು ಅವಕಾಶವಿಲ್ಲ ಎಂದು ಹೇಳಬಹುದು. ಈಗಾಗಲೇ ಕೆಲವುಕಡೆ ರಿಸರ್ವಾಯರ್‌ಗಳನ್ನು ಕಟ್ಟಬೇಕೆಂದು ಉದ್ದೇಶಿಸಿ ಎಸ್ಟಿಮೇಟ್ ಕೂಡ ಆಗಿದೆ. ಅಂಥ ಒಂದೊಂದು ರಿಸರ್ವಾಯರ್ ಕಟ್ಟಿಸಿದರೆ ಕೆಲವುಕಡೆ ಸುಮಾರು 8-9 ಕೆರೆಗಳಿಗೆ ನೀರನ್ನು ಕೊರತೆ ಇಲ್ಲದೆ ಸರಬರಾಯಿಮಾಡಬಹುದು. ಈ ಪ್ರಕಾರ ನೀರೊದಗಿಸುವ ಏರ್ಪಾಡುಮಾಡಿದರೆ ಮುಂದೆ ಕೆರೆಗಳನ್ನು ಡಿ-ಸಿಲ್ಟ್ ಮಾಡುವ ತೊಂದರೆಯೇ ಇರುವುದಿಲ್ಲ. ಜನಗಳೂ ಇಂಥ ರಿಸರ್ವಾಯರ್‌ಗಳನ್ನು ಕಟ್ಟಬೇಕೆಂದು ಪದೇ ಪದೇ ಒತ್ತಾಯಮಾಡುತ್ತಲೂ ಇದ್ದಾರೆ. ಸರ್ಕಾರದವರೇನೊ ಇನ್ನೂ ಅತ್ತಕಡೆ ಕಣ್ಣು ತೆರೆದಿಲ್ಲ. ನನ್ನ ಅಭಿಪ್ರಾಯದಲ್ಲಿ ಇಂಥ ರಿಸರ್ವಾಯರ್‌ಗಳನ್ನು ಮಾಡಿಸುವುದರಿಂದ ಜನರಿಗೆ ಹೆಚ್ಚಿನ ಉಪಕಾರ ಮಾಡಿದಂತಾಗುತ್ತದೆ. ಆದ್ದರಿಂದ ಸರ್ಕಾರದವರು ಈ ರೀತಿ ಡಿ-ಸಿಲ್ಟ್ ಮಾಡುವುದಕ್ಕೆ ದುರುಪಯೋಗಪಡಿಸದೆ ಈ ರಿಸರ್ವಾಯರ್ ಕಟ್ಟಿಸಿಕೊಟ್ಟು ಅನುಕೂಲಪಡಿಸಿಕೊಟ್ಟರೆ 9 ಕೆರೆಗಳ ಕೆಳಗಿನ ರೈತರು ಹೆಚ್ಚು ಹೆಚ್ಚು ಆಹಾರ ಬೆಳೆಯಬಹುದು. ಆದ್ದರಿಂದ ಎರಡು ಮೂರು ವರ್ಷದ ಒಂದು ಯೋಜನೆಯನ್ನು ಹಾಕಿಕೊಂಡು, ಅವುಗಳಲ್ಲಿ ಎಸ್ಟಿಮೇಟ್ ಆಗಿರುವಂಥವುಗಳ ಸಂಬಂಧದಲ್ಲಿ ಕಾರ್ಯಕ್ರಮ ಕೈಕೊಂಡರೆ ಜನರಿಗೆ ನಿಜವಾದ ಪರಿಹಾರ ಒದಗಿಸುವುದಕ್ಕೆ ಸಾಧ್ಯವಾಗುತ್ತದೆ. ಅಂಥ ಕಾರ್ಯಕ್ರಮಗಳನ್ನು ಆದಷ್ಟು ಜಾಗ್ರತೆ ಕೈಗೊಳ್ಳುವರೆಂದು ನಂಬಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಬಿ. ಮಾಧವಾಚಾರ್ (ಭದ್ರಾವತಿ).—ಸ್ವಾಮಿ ಡಿ-ಸಿಲ್ಟಿಂಗ್ ಮತ್ತು ಇತರ ವಿಧಗಳಲ್ಲಿ ಹಣ ಖರ್ಚು ಮಾಡುವುದಕ್ಕೆ ಬದಲು I. V. C. ರಸ್ತೆಗಳನ್ನಾದರೂ ಮಾಡಿಸಲಿಕ್ಕೆ ಉಪಯೋಗಿಸಬೇಕೆಂದು ಮಾನ್ಯ ಸದಸ್ಯರೊಬ್ಬರು ಹೇಳಿದ್ದಾರೆ. ಈ ದಿವಸ ಆಹಾರದ ವಿಷಯದಲ್ಲಿ ನಮಗಿಷ್ಟು ಕೊರತೆಯಿರುವಾಗ ನಾವು ಮುಖ್ಯವಾಗಿ ಆಹಾರದ ಬೆಳೆಯಕಡೆ ಹೆಚ್ಚಿಗೆ ಗಮನ ಕೊಡಬೇಕು. ಹಾಗೆ ಆಹಾರವನ್ನು ಅಭಿವೃದ್ಧಿಮಾಡುವುದಕ್ಕೆ ಸಾಧಕವಾದ ಒಂದು ಸಲಹೆಯನ್ನು ಕೊಡುವುದಾದರೆ ಅದರಲ್ಲೂ ನಮ್ಮ ಭದ್ರಾವತಿಗೆ ಸಂಬಂಧಪಟ್ಟಂತೆ ಹೇಳುವುದಾದರೆ ಅಲ್ಲಿರುವ B. R. B. ಚಾನಲ್ ವಿಚಾರ ಹೇಳುತ್ತೇನೆ. ಅದು ಸುಮಾರು 10,000 ಎಕರೆಗೆ ನೀರು ಒದಗಿಸುತ್ತಿದೆ. ಒಂದಾನೊಂದು ಕಾಲದಲ್ಲಿ 45 ಮೈಲಿಗಳ ದೂರಕ್ಕೆ ಸಲೀಸಾಗಿ ನೀರನ್ನು ಒದಗಿಸುತ್ತಿದ್ದುದು ಇತ್ತೀಚೆಗೆ ಸರಿಯಾಗಿ ಮಳೆಯಾಗದೆ ಪೂರಾ ಪ್ರದೇಶಕ್ಕೆ ಒದಗಿಸುತ್ತಿಲ್ಲ. ಮೊದಲು 15 ಮೈಲಿ ಉದ್ದಕ್ಕೆ ಮಾತ್ರ ನೀರು ದೊರಕುತ್ತಿದ್ದು ಈಗ tail end ಪ್ರದೇಶಗಳಿಗೆ ಸರಿಯಾಗಿ ನೀರು ಒದಗುತ್ತಿಲ್ಲ. ಈ ಕೊರತೆಯನ್ನು ನಿವಾರಣೆಮಾಡುವುದಕ್ಕೆ ಮೊಸರಹಳ್ಳಿಯಲ್ಲಿರುವ ರೈಲ್ವೆ ಸೇತುವೆಯನ್ನು ಎತ್ತರಿಸಿದ ವಿನಾ ಸಾಧ್ಯವಾಗುವುದಿಲ್ಲ. ಜೊತೆಗೆ ನೀರಿನ ಹಂಚಿಕೆಗಾಗಿ ಹೆಚ್ಚಿಗೆ ಮನುಷ್ಯರಿದ್ದರೆ ಅನುಕೂಲ. ಆದ್ದರಿಂದ ಅಲ್ಲಿಗೆ ನೀರಗಂಟಿಯವರನ್ನು ಜಾಸ್ತಿಯಾಗಿ ನೇಮಕಮಾಡಬೇಕು. ಆದ್ದರಿಂದ ನಾನು ಸರ್ಕಾರದವರಿಗೆ ಹೇಳುವುದೇನೆಂದರೆ ಈಗ ಮಳೆ ವರ್ಷೇ ವರ್ಷೇ ಕಡಮೆಯಾಗುತ್ತಿರುವುದರಿಂದ ಇಂಥ ನಾಲೆಗಳ ವಿಷಯದಲ್ಲಿ ಹೆಚ್ಚು ಗಮನ ಕೊಟ್ಟರೆ ಒಳ್ಳೆಯದು. ಭದ್ರಾವತಿಯ ಈ B. R. B. ಛಾನಲ್ಲನ್ನು ಮುಂದುವರಿಸಿದರೆ ಸಿದ್ದಲಿಂಗಪುರದ 500 ಎಕರೆಗಳು ಕೂಡ ಪಾಗುವಳಿಗೆ ಬರುವುದಾಗಿದೆ. ಈಗಾಗಲೇ 4-5 ವರ್ಷಗಳಿಂದ ಆ ಊರಿನ ಜನರು ಬತ್ತ ಬೆಳೆಯುತ್ತಿದ್ದಾರೆ. ಆದ್ದರಿಂದ ಕೊಪ್ಪಕೆರೆಯನ್ನು ರಿಪೇರಿಮಾಡಿ ಈ channelನ್ನು ಮುಂದುವರಿಸಿದರೆ ಇನ್ನೂ ಹೆಚ್ಚು ಆಹಾರ ಬೆಳಸಬಹುದೆಂದು ಭಾವಿಸಿ ನಾನು ಈ ಖೋತಾ ನಿರ್ಣಯವನ್ನು ಸಮರ್ಥಿಸುತ್ತೇನೆ.

ಶ್ರೀ ಬಿ. ರಾಚಯ್ಯ (ಯಳಂದೂರು ಅನುಸೂಚಿತ ಜಾತಿಗಳು).—ಅಧ್ಯಕ್ಷರೇ, ನಿರಾವರೀ ಕಾಮಗಾರಿಗಳಿಗೆ ಸರ್ಕಾರದವರು ಒದಗಿಸತಕ್ಕಂಥ ದುಡ್ಡು ಆಗಾಗ್ಗೆ ಸರಿಯಾದ ರೀತಿಯಲ್ಲಿ ಉಪಯೋಗವಾಗದೆ ಯಾರಿಗಾಗಿ ಯಾವ ರೈತನ ಉಪಯೋಗಕ್ಕಾಗಿ ಈ ದುಡ್ಡನ್ನು ಉಪಯೋಗಿಸುತ್ತಿದೆಯೋ ಅದು ಅವರಿಗಾಗಿ ಸರಿಯಾದ ರೀತಿಯಲ್ಲಿ ಉಪಯೋಗವಾಗುತ್ತಿಲ್ಲವೆಂಬುದನ್ನು ನಾನು ಈ ಸಭೆಯ ಗಮನಕ್ಕೆ ತರುವುದಕ್ಕಾಗಿ ನನ್ನ ಖೋತಾ ನಿರ್ಣಯವನ್ನು ಕಳುಹಿಸಿದ್ದೇ. ಅದರಲ್ಲೂ ಚಾಮರಾಜನಗರ ಯಳಂದೂರು ತಾಲ್ಲೂಕುಗಳಲ್ಲಿ ಸಾಮಾನ್ಯವಾಗಿ ಕ್ಷಾಮ ಪೀಡಿತವಾದ ಪ್ರದೇಶಗಳಿಗೆ ನಾವು ನೀರನ್ನು ಒದಗಿಸಬೇಕಾದರೆ ಎಷ್ಟು ಕಷ್ಟವೆಂಬುದನ್ನು ಸಭೆಯವರಿಗೆ ಅರಿಕೆ ಮಾಡಿಕೊಳ್ಳಬಯಸುತ್ತೇನೆ. ಅಲ್ಲಿ ಸ್ವಾಭಾವಿಕವಾಗಿ ಹರಿಯುವ ಸುವರ್ಣಾವತಿನದಿಯು ಸಾಮಾನ್ಯವಾಗಿ ವರ್ಷವೆಲ್ಲಾ ನೀರನ್ನು ತರುವುದಿಲ್ಲ. ವರ್ಷಕ್ಕೆ ಎರಡು ಮೂರು ತಿಂಗಳಲ್ಲಿ ಮಾತ್ರ ಯಥೇಚ್ಛನೀರನ್ನು ತರುತ್ತದೆ. ಆಗ ನೆರೆ ಹೆಚ್ಚಾಗಿ ಬರುತ್ತದೆ. ಈ ಸುವರ್ಣಾವತೀನದಿಯ ಆಸರೆಯಲ್ಲೇ ಯಳಂದೂರು ಚಾಮರಾಜನಗರ ತಾಲ್ಲೂಕುಗಳಲ್ಲಿ ಅನೇಕ ಕೆರೆಗಳಿವೆ. ಹಾಗೆ ನೆರೆಬಂದ ಕಾಲದಲ್ಲಿ ಆ ಕೆರೆಗಳೆಲ್ಲಾ ತುಂಬುವಂತೆ ಮಾಡಿದರೆ ಅನೇಕ

(ಶ್ರೀ ಬಿ. ರಾಚಯ್ಯ)

ಜನ ರೈತರಿಗೆ ಅನುಕೂಲಮಾಡಿಕೊಟ್ಟ ಹಾಗಾಗುತ್ತದೆ. ಇದಕ್ಕಾಗಿ ಏನು ಮಾಡಬೇಕೆಂದರೆ, ಸುವರ್ಣಾವತಿ ನದಿಯ ಪ್ರತಿನಾಲೆಯ ಮೂಲೆಯಲ್ಲೂ ಒಂದು ಒಡ್ಡನ್ನು ಕಟ್ಟಿಸಿದರೆ ಎಲ್ಲಾ ಕೆರೆಗಳಿಗೂ ನೀರು ತುಂಬಿಕೊಳ್ಳಬಹುದು. ಈಗಲೂ ಕೂಡ ವರ್ಷ ವರ್ಷ ಆ ಪ್ರಾಂತದಲ್ಲಿನ ಸಾವಿರಾರು ಜನ ರೈತರುಗಳು ಸೇರಿ ಒಂದು ಮರಳಿನ ಅಣೆಕಟ್ಟನ್ನು ಹಾಕಿಕೊಂಡು ತಮ್ಮ ತಮ್ಮ ಕೆರೆಗಳಿಗೆ ನೀರು ತುಂಬಿಸಿಕೊಳ್ಳುತ್ತಿದ್ದಾರೆ. ಆದರೆ ನೆರೆ ಒಮ್ಮೆ ಹೆಚ್ಚಿಗೆ ಬಂತೆಂದರೆ ಆ ಅಣೆಕಟ್ಟು ಕಿತ್ತುಹೋಗುತ್ತದೆ. ಅಲ್ಲದೆ ಪ್ರತಿಸಾರಿಯೂ ಈ ರೀತಿ ಮಾಡುವುದು ಬಹಳ ಕಷ್ಟವಾಗುತ್ತದೆ. ಆದ್ದರಿಂದ ಸರ್ಕಾರದವರು ದಯವಿಟ್ಟು ಒಂದು ಖಾಯಂ ಅಣೆಕಟ್ಟನ್ನು ಪ್ರತಿನಾಲೆಯ ಮತ್ತು ಫೀಡರ್ ಕಾಲುವೆಗಳ ಮೂಲೆಯಲ್ಲೂ ಕಟ್ಟಿಸಿಕೊಟ್ಟರೆ ಒಳ್ಳೆಯದು. ಈ ರೀತಿಯಾಗಿ ಮಾಡುವುದಕ್ಕೆ ಮದ್ರಾಸ್ ಪ್ರಾಂತದವರಿಂದ ವಿರೋಧ ಬರಬಹುದೆಂದು ಹೇಳಬಹುದು. ಏಕೆಂದರೆ ಮದ್ರಾಸ್‌ಪ್ರಾಂತಕ್ಕೂ ಮೈಸೂರು ಸರ್ಕಾರದವರಿಗೂ ಹಿಂದೆ 1926ನೆಯ ಇಸವಿಯಲ್ಲಿಒಂದು ಕರಾರಾಗಿ ಮಧ್ಯೆ ಹೀಗೆ ಅಣೆಕಟ್ಟು ಕಟ್ಟುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಈ ಸುವರ್ಣಾವತಿ ನದಿಯು 40 ಮೈಲಿ ಉದ್ದದಲ್ಲಿ 30 ಮೈಲಿಯಷ್ಟು ನಮ್ಮಪ್ರಾಂತದಲ್ಲೇ ಇದ್ದು ಕೇವಲ 10 ಮೈಲಿಮಾತ್ರ ಮದ್ರಾಸ್ ಪ್ರಾಂತದಲ್ಲಿ ಹರಿಯುತ್ತಿರುವುದರಿಂದ ಹಿಂದಾಗಿರುವ ಷರತ್ತುಗಳನ್ನು ಬದಲಾಯಿಸಿ ಪ್ರತಿನಾಲೆಯ ಮೂಲದಲ್ಲಿ ಸುವರ್ಣಾವತಿನದಿಗೆ ಅಡ್ಡಲಾಗಿ ಒಂದು ಸಣ್ಣ ಅಣೆಕಟ್ಟನ್ನು ಹಾಕಿಕೊಟ್ಟರೆ ನೀರು ಬಂದಾಗ ಕೆರೆಗಳನ್ನು ಫೀಡರ್ ಚಾನಲ್ಸ್ ಮುಖಾಂತರ ತುಂಬಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಸಾಮಾನ್ಯವಾಗಿ ಅಕ್ಟೋಬರ್ ನವೆಂಬರ್ ತಿಂಗಳುಗಳಲ್ಲಿ ಮಾತ್ರ ಆ ಪ್ರದೇಶಗಳಲ್ಲಿ ನೀರು ಬಂದು ಕೆರೆಗಳಿಗೆ ಅಲ್ಪಸ್ವಲ್ಪ ನೀರು ಬರುತ್ತದೆ. ಈ ನೀರು ಸರಿಯಾಗಿ ಬತ್ತದ ಹೊಡೆ ಬರುವ ಹೊತ್ತಿಗೆ ಮುಗಿದುಹೋಗಿ ಕೈಗೆ ಬಂದ ಫಸಲುಕೂಡ ಅನೇಕವೇಳೆ ಒಣಗಿಹೋಗುವ ಪರಿಸ್ಥಿತಿ ಬರುತ್ತಿರುತ್ತದೆ. ಎಷ್ಟು ಉತ್ಪತ್ತಿ ನಿರೀಕ್ಷಿಸಿರುತ್ತೇವೆಯೋ ಅದರಲ್ಲಿ ಅರ್ಧದಷ್ಟು ಬರುವುದಿಲ್ಲ. ಆದ್ದರಿಂದ ಈ ಕೆಲಸವನ್ನು ಕೈಕೊಂಡು ಮಾಡಿಸಿಕೊಟ್ಟರೆ ಹೆಚ್ಚಿಗೆ ಆಹಾರ ಬೆಳೆಯಲು ಅನುಕೂಲ ಮಾಡಿದ ಹಾಗಾಗುತ್ತದೆ. ಈ ವರ್ಷವೇ ಅಷ್ಟು ಹಣವನ್ನೂ ಇದಕ್ಕೆ ಒದಗಿಸುವುದಕ್ಕೆ ಸಾಧ್ಯವಿಲ್ಲದಿರಬಹುದು ಈಗಲೂ ಅನೇಕ ಕಡೆ ಒದಗಿಸುತ್ತಿದ್ದೀರಿ; 10–12 ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಒಂದೊಂದು ಬ್ರೆಸ್ಟ್‌ವರ್ಕ್ ಅಣೆಕಟ್ಟನ್ನು ಹಾಕುವುದರಿಂದ ಅನೇಕ ಕೆರೆಗಳಿಗೆ ನೀರಿನ ಕೊರತೆಯನ್ನು ತಪ್ಪಿಸಿದಂತಾಗುತ್ತದೆ. ಒಟ್ಟಿನಲ್ಲಿ ಕೇವಲ ಒಂದು ಲಕ್ಷ ರೂಪಾಯಿಗಳಾಗಬಹುದು. ಇದು ಬಹಳ ಲಾಭದಾಯಕವಾಗಿ ನಡೆಸತಕ್ಕ ವಿಚಾರ. ರೆವಿನ್ಯೂಮಂತ್ರಿಗಳೂ ಮತ್ತು ಆಹಾರ ಮಂತ್ರಿಗಳೂ ಕಳೆದ ತಿಂಗಳು 24ನೆಯ ತಾರೀಖಿನಲ್ಲಿ ಅತ್ತ ಟೂರ್ ಮಾಡಿದಾಗ ಅಲ್ಲಿನ ಕ್ಷಾಮ ಪರಿಸ್ಥಿತಿಯನ್ನು ತಾವೇ ನೋಡಿದ್ದಾರೆ. ನಮ್ಮಲ್ಲಿ ಭೂಗುಣ ಚೆನ್ನಾಗಿದ್ದರೂ ಕೇವಲ ನೀರಿನ ಅಭಾವದಿಂದ ಎಷ್ಟು ಬೆಳೆಯಬಹುದೋ ಅಷ್ಟು ಬೆಳೆಯುತ್ತಿಲ್ಲ.

ಈ ಸಂದರ್ಭದಲ್ಲಿ ಇನ್ನೊಂದು ಅಂಶವನ್ನು ತಮ್ಮ ಗಮನಕ್ಕೆ ತರಬಹುದು. ಯಳಂದೂರು ಒಂದು ಜಹಗೀರಿ ತಾಲ್ಲೂಕು. ಆದ್ದರಿಂದ ಸರ್ಕಾರದವರು ಆ ಪ್ರದೇಶಕ್ಕೆ ಖರ್ಚು ಮಾಡುವುದಕ್ಕಾಗುವುದಿಲ್ಲವೆಂದು ಹೇಳಬಹುದು. ಆದರೆ ಹಾಲಿ ಯಳಂದೂರು ಜಹಗೀರಿ ಫಂಡಿನಲ್ಲೇ ಮೂರು ಲಕ್ಷ ರೂಪಾಯಿಗಳಿವೆ. ಮಂತ್ರಿವರ್ಯರು ಈ ಫಂಡಿನಿಂದ ಕಡೆಯಪಕ್ಷ ಒಂದು ಲಕ್ಷರೂಪಾಯಿಗಳನ್ನು ಖರ್ಚುಮಾಡುವುದಕ್ಕೆ ಈ ವರ್ಷವೇ ಸಿದ್ಧವಾಗಿದ್ದೇವೆಂದು ಜನರಿಗೆ ಭರವಸೆಯನ್ನು ಕೂಡ ಕೊಟ್ಟಿದ್ದಾರೆ. ಆದ್ದರಿಂದ ಈ ವರ್ಷವೇ ಯಳಂದೂರು ಕೆರೆಗೆ ನೀರು ಒದಗಿಸಲು ಅಣೆಕಟ್ಟು, ಅಂಬಳೆ ಕೆರೆಗೆ ನೀರುಒದಗಿಸುವ ಅಣೆಕಟ್ಟು ಮತ್ತು ಮದ್ದೂರು ಕೆರೆಗೆ ನೀರು ಒದಗಿಸುವ ಅಣೆಕಟ್ಟು ಕಟ್ಟಿಸಿದರೆ ಸಾಧಾರಣವಾಗಿ ಬಹಳಜನರಿಗೆ ಅನುಕೂಲ ಮಾಡಿದ ಹಾಗಾಗುತ್ತದೆ. ಮುಂದಿನ ಪ್ರೊಕ್ಯೂರ್‌ಮೆಂಟಿನಲ್ಲೂ ನಮ್ಮ ಜನರು ಬೇಕಾದಷ್ಟು ಸಹಾಯ ಮಾಡುವುದಕ್ಕೆ ಸಿದ್ಧವಾಗಿದ್ದಾರೆ. ಸರ್ಕಾರದವರು ಯಾವಾಗ ನಮ್ಮ ಕಷ್ಟಕ್ಕಾಗುತ್ತಾರೋ ನಾವೂ ಅವರ ಕಷ್ಟದಲ್ಲಿ ಸಹಾಯ ಮಾಡಬೇಕೆಂದು ಹೇಳಿ ಮನವಿಮಾಡಿಕೊಳ್ಳುವುದಕ್ಕೂ ಅವಕಾಶವಿರುತ್ತದೆ. ಆದ್ದರಿಂದ ಸರ್ಕಾರದವರು ಇದನ್ನು ಆದಷ್ಟು ಜಾಗ್ರತೆ ನೆರವೇರಿಸಿ ಕೊಡಬೇಕೆಂದು ಬೇಡಿಕೊಳ್ಳುತ್ತೇನೆ.

ಶ್ರೀ ಎಂ. ಶಂಕರಲಿಂಗೇಗೌಡ (ನಾಗಮಂಗಲ).—ಸ್ವಾಮಿ, ಕೆರೆಗಳನ್ನು Desilt ಮಾಡಿ ಕೆರೆಯ ಹೂಳನ್ನು ತೆಗೆದು ನೀರನ್ನು ಹೆಚ್ಚಿಸುತ್ತೇವೆ ಎಂಬ ಸರ್ಕಾರದ ಪಾಲಿಸಿಯಿಂದ ಎಷ್ಟು ಮಟ್ಟಿಗೆ ಪ್ರಯೋಜನವಾಗುತ್ತದೆ ಎಂಬುದನ್ನು ಸ್ವಲ್ಪ ವಿವರಿಸುತ್ತೇನೆ. ಒಂದು ಕೆರೆಯೊಳಗೆ ಒಂದು ಎಕರೆ ಜಾಗವನ್ನು ಒಂದು ಗಜ ಅಗೆದರೆ 4840 ಚದರ ಗಜ ಆಗುತ್ತದೆ. ಗಜಕ್ಕೆ ಹನ್ನೆರಡಾಣೆಯಂತೆ ಕೂಲಿ ಲೆಖ್ಖ ಹಾಕಿದರೆ ಒಂದು ಎಕರೆ ಭೂಮಿ ಅಗೆಯುವುದಕ್ಕೆ 3,200 ರೂಪಾಯಿ ಕೂಲಿ ಆಗುತ್ತದೆ. ಅಂದರೆ 3,200 ರೂಪಾಯಿಗಳನ್ನು ಖರ್ಚು ಮಾಡಿದರೆ ಒಂದು ಎಕರೆಗೆ ಬೇಕಾಗುವಷ್ಟು ನೀರು ಒಂದು Unit of water ಶೇಖರಿಸಬಹುದು. ಹೀಗೆ ಮಣ್ಣೇರಿಯಲ್ಲಿ ಅಗೆದು ಹಾಕಿದ್ದ ಮಣ್ಣು ಮಳೆ ಬಂದಾಗ ಪುನಃ ಕೆರೆಯೊಳಕ್ಕೆ ಬಂದು ತುಂಬಿಕೊಳ್ಳುತ್ತದೆ. ಆದ್ದರಿಂದ 3,200 ರೂ.ಗಳನ್ನು ಒಂದೆ ಎಕರೆಗಾಗುವಷ್ಟು ನೀರಿಗೆ ಖರ್ಚು ಮಾಡುವುದಕ್ಕೆ ಬದಲಾಗಿ waste weir ಅಥವಾ ಒಂಡನ್ನು ಎತ್ತರ ಮಾಡಿದರೆ ಒಳ್ಳೆಯದು. Actual Desiltng ನಿಂದ ಕೆರೆ ಆಳವಾಗುತ್ತದೆ. ನೀರು ಹೆಚ್ಚಾಗಿರುತ್ತದೆ ಎಂದು ಇಂಜನಿಯರುಗಳು ಹೇಳಬಹುದು. ಹೀಗೆ ಒಂದು unit ನೀರಿಗೆ 3,200 ರೂಪಾಯಿಗಳಂತೆ ಖರ್ಚು ಮಾಡಿದರೆ ಎಷ್ಟು ಕೆರೆಗಳ ಹೂಳನ್ನು ತೆಗೆಯುವುದಕ್ಕೆ ಸಾಧ್ಯವಾಗುತ್ತದೆ? ವರ್ಷೇ ವರ್ಷೇ ಮಳೆ ಬಂದು ಪುನಃ ಮಣ್ಣು ಕೆರೆಗೇ ಬಂದು ತುಂಬಿಕೊಳ್ಳುತ್ತದೆ. ಆದ್ದರಿಂದ ಈ Desilting item ನ್ನು ಇಂಜಿನಿಯರಿಂಗ್ ಡಿಪಾರ್ಟ್‌ಮೆಂಟ್‌ನ ಲೆಖ್ಖದಿಂದ ತೆಗೆದು ಹಾಕಬೇಕೆಂದು ಕೇಳಿಕೊಳ್ಳುತ್ತೇನೆ. ಇದರಿಂದ ಬಹಳ ಅನ್ಯಾಯವಾಗುತ್ತಿದೆ. ಎಷ್ಟೋ Corruption ನಡೆಯುತ್ತಿದೆ. ಅದು ನಮಗೆ ಗೊತ್ತಾಗುವುದಿಲ್ಲ. ಈ Desilting ಆಗುವುದರಿಂದ ಕೆರೆಯಲ್ಲಿ ನೀರು ನಿಲ್ಲುತ್ತದೆಯೆ ಎಂಬುದನ್ನು ಮರಾಮತ್ ಇಲಾಖೆ ಮಂತ್ರಿಗಳು ಯೋಚಿಸಲಿ. ಕೆರೆ ಹೂಳು ತೆಗೆಯುವುದನ್ನು ಬಿಟ್ಟು ಬಿಟ್ಟು Waste weir ನ್ನೋ ಅಥವಾ ಬಂಡನ್ನೋ ಎತ್ತರ ಮಾಡಿದರೆ ಕೆರೆ ಅಂಗಳವೆಲ್ಲಾ ಮುಳುಗಿಹೋಗಿ ರೈತನಿಗೆ ಅನುಕೂಲವಾಗುತ್ತದೆ. Desilting ಗೋಸ್ಕರ 30,000 ರೂ.ಗಳನ್ನು ಸರ್ಕಾರದವರು ಮಂಜೂರು ಮಾಡಿದ್ದಾರೆ. ಅದನ್ನೇ Waste weir ರಿಪೇರಿ ಮಾಡುವುದಕ್ಕೆ ಉಪಯೋಗಿಸಿಕೊಳ್ಳಬಹುದು. ಅದಿಲ್ಲದೆ ಜೂನ್ ತಿಂಗಳಲ್ಲಿ ಕಂದಾಯ ಮಾಡುವುದಕ್ಕೆ ಹೋಗಿ ರೈತನ ಮನೆಯಲ್ಲಿದ್ದ ಸಾಮಾ

ನನ್ನು ಹರಾಜು ಹಾಕಿ ದುಡ್ಡು ತೆಗೆದುಕೊಂಡು ಹೋದರೆ ಸರ್ಕಾರದವರು ಜವಾಬ್ದಾರಿಯುತವಾಗಿ ಕೆಲಸ ಮಾಡಿದಂತಾಗುವುದಿಲ್ಲ. ಆದ್ದರಿಂದ ನಾನು ಹೇಳಿದಂತೆ ಸರ್ಕಾರದವರು ಜವಾಬ್ದಾರಿಯಿಂದ ಕೆಲಸ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಂ. ರಾಜಶೇಖರಮೂರ್ತಿ (ಯಳಂದೂರು).—ಮಾನ್ಯಮಿತ್ರರಾದ ಶ್ರೀ ಬಿ. ರಾಚಯ್ಯನವರು ಸಭೆಯ ಮುಂದೆ ಮಂಡಿಸಿರತಕ್ಕ ಖೋತಾ ನಿರ್ಣಯವನ್ನು ಪುಷ್ಟೀಕರಿಸಿ ಅವರ ವಾದವನ್ನು ಅನುಸರಿಸಿ ಎರಡು ಮಾತುಗಳನ್ನು ಆಡಬೇಕೆಂದು ಇಚ್ಛೆಪಡುತ್ತೇನೆ. ಯಳಂದೂರು ತಾಲ್ಲೂಕು ಮೈಸೂರು ಸಂಸ್ಥಾನದಲ್ಲಿ ಬಹಳ ಹಿಂದುಳಿದ ತಾಲ್ಲೂಕು. ಅಲ್ಲಿ ನೀರಾವರಿ ಕಾಮಗಾರಿ ಕೆಲಸವನ್ನು ಇದುವರೆಗೆ ಸರ್ಕಾರದವರು ಯಾವ ವಿಧವಾಗಿಯೂ ಕೈಕೊಂಡಿಲ್ಲ. ರೈತರು ಬಂದು ಎಷ್ಟೋ ಸಾರಿ ಮನವಿ ಮಾಡಿಕೊಂಡರೂ ಸರ್ಕಾರದವರು ಹೇಳುತ್ತಾರೆ. "ಯಳಂದೂರು ಜಹಗೀರಿ ತಾಲ್ಲೂಕು, ಅದಕ್ಕೂ ನಮಗೂ ಸಂಬಂಧವಿಲ್ಲ, ಜಹಗೀರ್‌ದಾರರನ್ನೇ ಕೇಳಿಕೊಳ್ಳಿ, ಅವರು ಮಾಡಿಕೊಡುತ್ತಾರೆ,'' ಎಂದು. ಜಹಗೀರ್‌ದಾರರನ್ನು ಕೇಳಿದರೆ "ಜಹಗೀರಿ Abolition ಬಿಲ್ಲು ಬಂದಿದೆ. ಇವೊತ್ತೋ ನಾಳೆಯೋ ಈ ಜಹಗೀರಿಯನ್ನು ಕಿತ್ತುಕೊಳ್ಳುತ್ತಾರೆ. ನಾವು ಏತಕ್ಕೆ ಅಭಿವೃದ್ಧಿ ಕಾರ್ಯ ಕೈಕೊಳ್ಳಬೇಕು, ಸರ್ಕಾರದವರನ್ನೇ ಹೋಗಿ ಕೇಳಿಕೊಳ್ಳಿ'' ಎಂದು. ಹೀಗಾಗಿಬಿಟ್ಟು ಯಳಂದೂರು ಜಹಗೀರಿಯಲ್ಲಿ ಯಾವ ವಿಧವಾದ ಅಭಿವೃದ್ಧಿ ಕಾರ್ಯಗಳೂ ನಡೆದಿಲ್ಲ. ಸರ್ಕಾರದವರು Harvest ಬಂದ ಕಾಲದಲ್ಲಿ Harvest ಕಾನೂನನ್ನು ಯಳಂದೂರು ಜಹಗೀರಿಗೆ ಅನ್ವಯಿಸಿ "ಈ ಜಹಗೀರು ನಮ್ಮ ಆಡಳಿತದಲ್ಲಿದೆ, ಬೆಳೆದದ್ದರಲ್ಲಿ ಸ್ವಲ್ಪ ಭಾಗ ಸರ್ಕಾರಕ್ಕೆ ಒಪ್ಪಿಸಿಬಿಡಿ'' ಎಂದು ಹೇಳುತ್ತಾರೆ. ಈ ಸರ್ಕಾರದ ವಾದ ಬಹಳ ವಿಚಿತ್ರವಾಗಿ ಕಾಣುತ್ತದೆ. ಯಳಂದೂರಿನಲ್ಲಿ ಪ್ರತಿಯೊಂದು ಗ್ರಾಮಕ್ಕೂ ಒಂದೊಂದು ಕೆರೆ ಇದೆ. ಆ ಕೆರೆಗಳಿಗೆ ನಾಲ್ಕು ಸಾರಿ ನೀರು ತುಂಬಿದರೆ ಬತ್ತದ ಬೆಳೆ ಬರುತ್ತದೆ, ನಾಲ್ಕು ಸಾರಿ ತುಂಬದಿದ್ದರೆ ಅದರಿಂದ ಪ್ರಯೋಜನವಾಗುವುದಿಲ್ಲ, ಬತ್ತ ರೈತರ ಕೈಗೆ ಸೇರುತ್ತದೆ ಎಂಬ ನಂಬಿಕೆ ಇರುವುದಿಲ್ಲ. ಸುವರ್ಣಾವತಿ ನದಿಯ ಪಕ್ಕದಲ್ಲೇ ಈ ಕೆರೆಗಳು ಇವೆ. ಸುವರ್ಣಾವತಿ ನದಿ ಮತ್ತು ಕೆರೆಗಳ ಮಧ್ಯದಲ್ಲಿ ಒಂದು ಕಾಲುವೆ ತೆಗೆಸಿ ನದಿಗೆ ಒಂದು ಅಣೆಕಟ್ಟು ಕಟ್ಟಿದರೆ ಪ್ರವಾಹ ಬಂದ ಕಾಲದಲ್ಲಿ ನದಿಯ ನೀರು ಕೆರೆಗಳಿಗೆ ಬಂದು ತುಂಬಿ ರೈತರಿಗೆ ಸಹಾಯವಾಗುತ್ತದೆ. ಆದುದರಿಂದ ಇದನ್ನು ಆದಷ್ಟು ಬೇಗ ಮಾಡಿಸಿಕೊಡಬೇಕೆಂದು ಬೇಡಿಕೊಳ್ಳುತ್ತೇನೆ.

Sri J. MOHAMED IMAM.—On a point of information. I would like to know under which head provision has been made for Lift Irrigation in the Budget.

Sri Kadidal MANJAPPA.—Rs. 5 lakhs have been given to the Public Works Department.

Sri J. MOHAMED IMAM.—I do not find any heading for Lift Irrigation under that Department.

Sri Kadidal MANJAPPA.—You may not find it there.

Sri J. MOHAMED IMAM.—But you are going to reappropriate. For that, there must be a specific provision in the Budget from which it could be reappropriated.

Mr. SPEAKER.—It is reappropriation in other words. So, it must be shown in the Budget.

Sri J. MOHAMED IMAM.—I do not find any provision made under the head 'Lift Irrigation'.

Mr. SPEAKER.—He will search for it.

*ಶ್ರೀ ಎಂ. ವಿ. ರಾಮರಾವ್ (ತುಮಕೂರು).—ಸ್ವಾಮಿ ಕೆರೆಗಳನ್ನು Desilt ಮಾಡಿ ನೀರು ನಿಲ್ಲುವ ಹಾಗೆ ಮಾಡುವ ಉದ್ಯಮದ ವಿಷಯದಲ್ಲಿ ಶ್ರೀಮಾನ್ ಶಂಕರಲಿಂಗೇಗೌಡರು ಹೇಳಿದಂಥ ಅಂಶ ಗಮನಾರ್ಹವಾಗಿದೆ. ಸಾಮಾನ್ಯವಾಗಿ ಇಂಜನಿಯರುಗಳಿಗೆ ಟೆಕ್ನಿಕಲ್ opinion ಕೊಡಿ ಎಂದು ಕೇಳಿದರೆ ಅವರ ಅಭಿಪ್ರಾಯವನ್ನೇ ಸಮರ್ಥಿಸುತ್ತಾರೆ. ಈಗ ಏನಾಗುತ್ತದೆ ಅಂದರೆ ಮನುಷ್ಯರಿಗೆ ಪ್ರಾಣಿಗಳಿಗೆ ಜೀವದ ಅವಧಿ ಹೇಗೆ ಇದೆಯೋ ಕೆರೆಗಳಿಗೂ ಅದೇ ರೀತಿ ಇದೆ. ನೂರಾರು ವರ್ಷಗಳಿಂದ ಈ ಕೆರೆಗಳು ಜೀವಂತವಾಗಿದ್ದು ನೀರು ನಿಂತು ಮರಳು, ಮಣ್ಣು ಮುಚ್ಚಿಕೊಂಡು ಹೋಗುವುದನ್ನು ಬೇರೆ ಉಪಾಯದಿಂದ ತಡೆಗಟ್ಟುವುದಕ್ಕೆ ಹೋಗಿ ಜೀವ ಮುಗಿದು ಹೋಗಿರುವ ಈ ಕೆರೆಗಳಿಗೆ ಕಾಮಗಾರಿ ಮಾಡಿ ಜೀವದಾನ ಮಾಡುವುದಕ್ಕಾಗುವುದಿಲ್ಲ. ಶ್ರೀಮಾನ್ ಶಂಕರಲಿಂಗೇಗೌಡರು ಹೇಳಿದ ಹಾಗೆ ಒಂದು ಎಕರೆ ಪ್ರದೇಶದಲ್ಲಿ ಒಂದು ಗಜ ಆಳವಾಗಿ ಮಣ್ಣನ್ನು ತೆಗೆದುಬಿಟ್ಟರೆ ಕೆರೆಯ ಬಂಡಿಗೆ ಅಷ್ಟು ಮಣ್ಣನ್ನೂ ಹಾಕಬೇಕಾಗುತ್ತದೆ. ಕೆರೆಯ ಅಚ್ಚುಕಟ್ಟಿಗೆ ಹಾಕುವುದಕ್ಕಾಗುವುದಿಲ್ಲ. ಗದ್ದೆಯ ಅಂಚಿಗೆ ಹಾಕುವುದಕ್ಕಾಗುವುದಿಲ್ಲ. ಅಲ್ಲೇ ಮೇಲುಗಡೆ ಹಾಕಬೇಕು. ಹೀಗೆ ಮೇಲುಗಡೆ ಹಾಕಿದರೆ ಮಳೆ ಬಂದಾಗ ಆ ಮಣ್ಣು ಕೆಳಗೆ ಬಂದು ಕೆರೆ ತುಂಬಿ ಹೋಗುತ್ತದೆ. Natural law of things ಪ್ರಕಾರ ನಡೆಯುತ್ತದೆ; ನಮ್ಮ ಇಷ್ಟದಂತೆ ನಡೆಯುವುದಿಲ್ಲ. ಬೇರೆ ಪ್ರದೇಶದಲ್ಲಿ ಹಾಕಿ ಮಣ್ಣು ಪುನಃ ಕೆರೆಗೆ ಬಾರದಿರುವ ರೀತಿ ಮಾಡುವುದಕ್ಕಾಗುವುದಿಲ್ಲ. ಹೀಗಾಗಿ ನಾವು ಖರ್ಚು ಮಾಡಿದ ಹಣ ವ್ಯರ್ಥವಾಗುತ್ತದೆ. ಈ ವಿಧವಾಗಿ ಹಣ ಖರ್ಚು ಮಾಡುವುದರಿಂದ ಯಾರಿಗೂ ಏನೂ ಪ್ರಯೋಜನವಾಗುವುದಿಲ್ಲ. ಇನ್ನೊಂದು ವಿಷಯ, ಹೂಳು ಹೋಗಿರತಕ್ಕ ಕೆರೆಗಳಿಗೆ Waste weir ಎತ್ತರ ಮಾಡಿದರೆ ನೀರು ನಿಂತು ಮೇಲ್ಕಂಡ ಪ್ರಯೋಜನವೇನೋ ಆಗುತ್ತದೆ. ಆದರೆ ದನಕರುಗಳಿಗೆ ಗೋಮಾಳವಿಲ್ಲದಂತಾಗುತ್ತದೆ. Distress relief ಕಾಮಗಾರಿ ವಿಷಯದಲ್ಲಿ ಅವಸರವಾಗಿ Estimate ತಯಾರು ಮಾಡಿ ಕೆಲಸವನ್ನು ಜಾರಿಗೆ ತೆಗೆದುಕೊಂಡು ಬರುವುದಕ್ಕೆ ಅವಕಾಶವಿಲ್ಲದಿರುವುದರಿಂದ ಮತ್ತು ಜನಗಳಿಗೆ ಕೂಲಿ ಸಿಕ್ಕುವ ಹಾಗೆ ಮಾಡುವ ಉದ್ದೇಶದಿಂದ Desilting ಕೆಲಸವನ್ನು ಮಾಡುವುದಕ್ಕೆ ಏನಾದರೂ justification ಹುಡುಕಬಹುದೇ ವಿನಾ ಇದು ನ್ಯಾಯವಾದ ಕಾರ್ಯಕ್ರಮ ಎಂದು ಹೇಳಿ ಮುಂದುವರಿಸಿಕೊಂಡು ಹೋಗುವುದು ಉಚಿತವಲ್ಲ, ಅದು ಒಂದು ವಿಷಯ. Desilting ಮಾಡುವುದಕ್ಕಿಂತ ಹೆಚ್ಚು ಜರೂರಾದುದು ಕೆರೆಗಳನ್ನು ಸರಿಯಾಗಿ ಆಬಾದಿನಲ್ಲಿ ಇಟ್ಟುಕೊಂಡಿದ್ದಾರೆಯೋ

(ಶ್ರೀ ಎಂ. ವಿ. ರಾಮರಾವ್.)

ಇಲ್ಲವೇ ಎಂಬುದು. ಹತ್ತಾರು ವರ್ಷಗಳ ಹಿಂದೆ ಕೆರೆ ತುಂಬಿ 7—8 ವರ್ಷಗಳಿಂದ ಕೆರೆಗೆ ನೀರು ಬಾರದೆ ಇರುವ ಪಕ್ಷದಲ್ಲಿ ಮೋಳೆ ಬಿದ್ದು ಮಳೆ ಬಂದಾಗ ಏರಿಗಳು ಕೊಚ್ಚಿಕೊಂಡು ಹೋಗುವ ಸಂದರ್ಭಗಳು ಸರ್ಕಾರದ ಗಮನಕ್ಕೆ ಬಂದಿವೆ. ಆದ್ದರಿಂದ ಕೆರೆಗಳನ್ನು ದುರಸ್ತಿನಲ್ಲಿಟ್ಟುಕೊಂಡಿರುವುದು ಮತ್ತು Feeder channels ಗಳಲ್ಲಿ ನೀರು ಬರುವಂತೆ ಮಾಡುವುದು ಅವಶ್ಯಕ ಎಂದು ಹೇಳುತ್ತೇನೆ. ಈ Desilting ಗೆ ಹೆಚ್ಚಿಗೆ ಹಣ ಖರ್ಚು ಮಾಡುವ ಬದಲು ಹೊಸದಾಗಿ ಕೆರೆ ಕಟ್ಟಿಸಿದರೆ ಒಳ್ಳೆಯದು. Desilting ಮಾಡುವುದರಿಂದ ಜನಗಳಿಗೆ ಪ್ರಯೋಜನವಿಲ್ಲ. ನೀರು ನಿಲ್ಲಬೇಕೆಂದು ಖರ್ಚು ಮಾಡತಕ್ಕ ದುಡ್ಡಿಗೂ ಅದರಿಂದ ಜನಗಳಿಗೆ ಆಗತಕ್ಕ ಪ್ರಯೋಜನಕ್ಕೂ ಏನೂ ಸಾಮರಸ್ಯವಿಲ್ಲ. ಈ ವಿಷಯವನ್ನು ಸರ್ಕಾರದವರು ಬಹಳ ಮುಂದಾಲೋಚನೆಯಿಂದ ಪರಿಶೀಲಿಸಬೇಕು ಮತ್ತು ಸರಿಯಾದ ಅಭಿಪ್ರಾಯವನ್ನು ಪಡೆದುಕೊಂಡು ಈ ವಿಚಾರದಲ್ಲಿ ಇಂಜನಿಯರಿಂಗ್ ಇಲಾಖೆಗೆ ಹೆಚ್ಚು ಪ್ರೋತ್ಸಾಹ ಕೊಡಬಾರದೆಂದು ಹೇಳಿ ಈ ಖೋತಾ ಸೂಚನೆಯನ್ನು ನಾನು ವಿರೋಧಿಸುತ್ತೇನೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ (ಅರಕಲಗೂಡು).—ಶ್ರೀಮಾನ್ ಶಂಕರಲಿಂಗೇಗೌಡರು ಮತ್ತು ಶ್ರೀ ರಾಮರಾಯರು ಹೇಳಿದ ಅಂಶಗಳನ್ನು ಪುಷ್ಟೀಕರಿಸುವುದಕ್ಕೆ ಸಾಧ್ಯವಿಲ್ಲ. ಅವರು ತುಮಕೂರು ಡಿಸ್ಟ್ರಿಕ್ಟ್ ಮತ್ತು ನೆಲಮಂಗಲ ತಾಲ್ಲೂಕುಗಳಲ್ಲಿರುವ ದೊಡ್ಡ ದೊಡ್ಡ ಕೆರೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, Desilting ನಿಂದ ಅಷ್ಟೊಂದು ಪ್ರಯೋಜನವಾಗುವುದಿಲ್ಲವೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಆದರೆ ಮಲೆನಾಡಿನಲ್ಲಿರುವ ಸಣ್ಣ ಸಣ್ಣ ಕೆರೆಗಳಿಗೆ ಮುಖ್ಯವಾಗಿ ಆಗಬೇಕಾದದು Desilting. 40-50 ವರ್ಷಗಳಿಂದ ಅಲ್ಲಿ ಯಾವ ರೀತಿಯ ಕಾಮಗಾರಿಗಳೂ ಆಗದೆ ಹೂಳು ನಿಂತು ಹೋಗಿದೆ. ಆ ಹೂಳನ್ನು ತೆಗೆದರೆ, ಕೆರೆಗಳಲ್ಲಿ ನೀರು ತುಂಬಿ ಜನಗಳಿಗೆ ಉಪಕಾರವಾಗುತ್ತದೆ. ಕೆರೆಗಳಲ್ಲಿ ನೀರು ನಿಲ್ಲುವುದರಿಂದ ಅನೇಕ ಕಡೆ ಜಮೀನು ಸಾಗಿಗೆ ಬರುವುದಕ್ಕೆ ಅನುಕೂಲವಾಗುತ್ತದೆ. ಮೈನರ್ ಟ್ಯಾಂಕ್ restoration ಬಹಳ ಹಿಂದಿನಿಂದ ಪ್ರಾರಂಭವಾಗಿದೆ ಎಂದು ಹೇಳುತ್ತಿದ್ದಾರೆ. ಇಷ್ಟು ವರ್ಷಗಳೊಳಗೆ ಇಷ್ಟು ಕೆರೆಗಳನ್ನು restore ಮಾಡಬೇಕು ಎಂದು ಹೇಳಿ ಸರ್ಕಾರದವರು ಯಾವ ಒಂದು planಅನ್ನೂ ತಯಾರುಮಾಡಿ, ಆ ರೀತಿ ಕೆಲಸ ಮಾಡದೆ ಇರುವುದು ತುಂಬ ವಿಷಾದಕರ. ಹಾಸನ ಜಿಲ್ಲೆಯನ್ನು ತೆಗೆದುಕೊಂಡರೆ, ಸರ್ಕಾರದವರು 4-6 ವರ್ಷಗಳಿಂದ ಯಾವ ವಿಧವಾದಂಥ ಒಂದು ದೊಡ್ಡ ಯೋಜನೆಯನ್ನು ಮಾಡಿಕೊಂಡು ಅದರಂತೆ ಕೆರೆಗಳನ್ನು ರೆಸ್ಟೋರುಮಾಡಿಸಿಲ್ಲ. ಅಲ್ಲಿ ಸಾವಿರಾರು ಸಣ್ಣ ಕೆರೆಗಳಿವೆ. ಆಲೂರು ಚಿಕ್ಕ ತಾಲ್ಲೂಕು ಒಂದರಲ್ಲಿ ಕೆರೆಕಳಗೆ ಗದ್ದೆಗಳಲ್ಲಿ ಬೆಳೆದ 50,000 ಪಲ್ಲ ದವಸವನ್ನು surplus ಆಗಿ ಕೊಟ್ಟಿದ್ದಾರೆ. ಬೇಲೂರು ತಾಲ್ಲೂಕಿನಲ್ಲಿ 75 ಸಾವಿರ ಪಲ್ಲ ಬತ್ತ ಕೊಟ್ಟಿದ್ದಾರೆ. ಹೀಗೆ ಅನುಕೂಲಗಳಿದ್ದರೆ ಲಕ್ಷಾಂತರ ಪಲ್ಲ ಬತ್ತ ಬೆಳೆಯುವುದಕ್ಕೆ ಅವಕಾಶವಿದ್ದರೂ ಕೂಡ, ನಮ್ಮ ಸರ್ಕಾರದವರು ಬೇರೆ ಕಡೆ ದೊಡ್ಡ ಪ್ರಾಜೆಕ್ಟಿಗೆ 5 ಕೋಟಿ 10 ಕೋಟಿ ರೂಪಾಯಿಗಳನ್ನು ಖರ್ಚುಮಾಡುತ್ತಾರೆ, ಮಲೆನಾಡು ಜಿಲ್ಲೆಗಳಲ್ಲಿ ಸಣ್ಣ ಸಣ್ಣ ಕಾಮಗಾರಿಗಳನ್ನು ಮಾಡುವುದಕ್ಕಾಗಲಿ ಅಥವಾ ಕೆರೆಗಳನ್ನು ದುರಸ್ತಿಮಾಡುವುದಕ್ಕಾಗಲಿ 5 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದರೆ, ದ್ವಿಗುಣವಾಗಿ ಬತ್ತ ಬೆಳೆಯಬಹುದು. ಇದನ್ನು ಗಮನಕ್ಕೆ ತಂದುಕೊಳ್ಳದೆ ಉದಾಸೀನಮಾಡಿದ್ದಾರೆ. ಹಾಸನ ಮತ್ತು ಇತರ ಮಲೆನಾಡು ಜಿಲ್ಲೆಗಳಲ್ಲಿ ಮೈನರ್ ಕೆರೆಗಳ restorationಗೆ ಸಾಕಾದಷ್ಟು ದುಡ್ಡನ್ನು ಬಹಳ ವರ್ಷಗಳಿಂದಲೂ ಒದಗಿಸದೆ ಇರುವುದರಿಂದ, ವಿಪರೀತವಾಗಿ ಮೈನರ್ ಕೆರೆಗಳ restoration ಕೆಲಸ ನಿಂತು ಹೋಗಿದೆ. ಕೆರೆಗಳು ಬೇಕಾದಷ್ಟು ಇವೆ, ಮಳೆಯೂ ಬೇಕಾದಷ್ಟು ಬೀಳುತ್ತದೆ; ಆದರೆ ಬಂದ ನೀರು ಅನ್ಯಾಯವಾಗಿ ಹಾಳಾಗುತ್ತಿದೆ. ಇಂದು ಹೇಳುತ್ತಿದ್ದೇನೆ, ನೀವು 10 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ, ನಾವು ಸಾವಿರಾರು ಎಕರೆಗಳನ್ನು ಸಾಗು ಮಾಡವುದಕ್ಕೆ ಏರ್ಪಾಡುಮಾಡುತ್ತೇವೆ. ದೊಡ್ಡ ದೊಡ್ಡ ಪ್ರಾಜೆಕ್ಟುಗಳನ್ನು ಕೈಕೊಳ್ಳುತ್ತಿದ್ದೀರಿ. ಇದು ಅವಶ್ಯಕವಿದ್ದರೂ ಇದರಿಂದ ಸರ್ಕಾರಕ್ಕೆ ವಿಪರೀತ ಖರ್ಚಾಗುತ್ತದೆ. ಪ್ರತಿಕೂಲ ಕಡಮೆ ಇರತಕ್ಕಂಥ ಮೈನರ್ ಕೆರೆಗಳನ್ನು restore ಮಾಡಿಸಿದರೆ, ನೀವು ಎಷ್ಟು ಖರ್ಚುಮಾಡುತ್ತೀರೋ ಅದಕ್ಕೆ ತಕ್ಕ ಪ್ರತಿಫಲ ದೊರೆಯುತ್ತೆ. ಈ ವರ್ಷ 5 ಕೋಟಿ ರೂಪಾಯಿಗಳನ್ನು ಖರ್ಚುಮಾಡುವುದು ಹಾಗಿರಲಿ, ಒಂದು ಕೋಟಿ ರೂಪಾಯಿಗಳನ್ನಾದರೂ ಮೈನರ್ ಟ್ಯಾಂಕ್‌ಗಳ ದುರಸ್ತಿಗೆ ಖರ್ಚುಮಾಡಿದರೆ, ಒಂದೆರಡು ವರ್ಷಗಳಲ್ಲಿಯೇ ಆಹಾರದ ಅಭಾವವನ್ನು ನೀಗುವುದಕ್ಕೆ ಸಾಧ್ಯವಾಗುತ್ತದೆ. ಸರ್ಕಾರದವರು ಇಂದಾದರೂ ಕೂಡ ಈ ವಿಷಯಕ್ಕೆ ತೀವ್ರ ಗಮನಕೊಟ್ಟು ಮೈನರ್ ಟ್ಯಾಂಕ್ restoration ವಿಚಾರದಲ್ಲಿ ಈ ವರ್ಷ ಕೆಲಸವನ್ನು ಮಾಡುವುದಕ್ಕೆ ಪ್ರಾರಂಭಮಾಡಬೇಕು. ಹಾಗೆ ಮಾಡಿದರೆ, ಆಹಾರ ಅಭಾವ ನೀಗಿಸುವುದಕ್ಕೆ ಸುಲಭ ಮಾರ್ಗವೆಂದು ನಾನು ತಮಗೆ ಸೂಚನೆಕೊಡಲು ಬಯಸುತ್ತೇನೆ.

4 P.M.

